### ಮಗು ಸ್ನೇಹಿ ಸಮಾಜಕ್ಕಾಗಿ

# ಶಿಕ್ಷಣ ಸಂಚಲನ



ಸಂಚಿಕೆ 3
2016-2017



## ಮಗು ಸ್ನೇಹಿ ಶಿಕ್ಷಣದತ್ತ ನಮ್ಮ ಹೆಜ್ಜೆ

ಪ್ರಾಥಮಿಕ ಶಿಕ್ಷಣವು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಬುನಾದಿ. ಅದ್ದರಿಂದ ಪ್ರಾಥಮಿಕ ಶಿಕ್ಷಣವು ಮಗು ಕೇಂದ್ರಿತ ಚಟುವಟಿಕೆಗಳಿಂದ ಕೂಡಿರಬೇಕು ಮತ್ತು ಶಾಲೆಯು ಮಗುವಿಗೆ ಆಕರ್ಷಣೀಯವಾಗಿರಬೇಕು. ಈ ನಿಟ್ಟಿನಲ್ಲಿ ಶಾಲೆಗಳು ಮಕ್ಕಳಿಗೆ ಸ್ನೇಹಮಯ ಪರಿಸರದ ಒದಗಣೆಯ ವ್ಯವಸ್ಥೆಯನ್ನು ಮಾಡಬೇಕು. ಈ ಎಲ್ಲಾ ವಾತಾವರಣವು ಮಕ್ಕಳಿಗೆ ಶಿಕ್ಷಣ ಒಂದು ಹೊರೆಯಾಗದೆ ವಿನೋದಮಯ ಕಲಿಕೆಗೆ ಪ್ರೋತ್ಸಾಹ ನೀಡುತ್ತದೆ. ಈ ವಾತಾವರಣವನ್ನು ನಮ್ಮ ಶಾಲೆಗಳಲ್ಲಿ ನಿರ್ಮಾಣ ಮಾಡುವ ನಿಟ್ಟಿನಲ್ಲಿ 'ಪಡಿ' ಸಂಸ್ಥೆಯ ಪ್ರಾಯೋಗಿಕ ಹಂತವಾಗಿ 24 ಶಾಲೆಗಳನ್ನು ಮಗು ಸ್ನೇಹಿ ಶಾಲೆಯಾಗಿ ನಿರ್ಮಾಣ ಮಾಡಲು ಕಳೆದ 3 ವರ್ಷಗಳಲ್ಲಿ ಸಾಕಷ್ಟು ಕಾರ್ಯಗಳನ್ನು ಹಮ್ಮಿಕೊಂಡಿತ್ತು ಮತ್ತು ಈ ಸಂದರ್ಭದಲ್ಲಿ ಸಾಕಷ್ಟು ಕಲಿಕೆ, ಸವಾಲುಗಳು ಮತ್ತು ಫಲಿತಾಂಶವನ್ನು ಕಂಡುಕೊಂಡಿದೆ. ಅಲ್ಲದೇ ಮಗು ಸ್ನೇಹಿ ಪರಿಕಲ್ಪನೆಯನ್ನು ಕ್ಲಸ್ಟರ್ ಮಟ್ಟಕ್ಕೆ ವಿಸ್ತರಿಸುವ ನಿಟ್ಟಿನಲ್ಲಿ 'ಪಡಿ'ಯು ಮುಂದಿನ ದಿನಗಳಲ್ಲಿ ಕಾರ್ಯಯೋಜನೆಯನ್ನು ರೂಪಿಸಿದ್ದು ಇನ್ನೂ ಹೆಚ್ಚು ಶಾಲೆಗಳನ್ನು ಮಗು ಸ್ನೇಹಿ ಶಾಲೆಯನ್ನಾಗಿಸುವ ನಿಟ್ಟಿನಲ್ಲಿ ಮುಂದಡಿಯಿಟ್ಟಿದೆ. ಹಾಗೆಯೇ ತಳಮಟ್ಟದಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಸಮನ್ವಯ ಸಮಿತಿಯ ರಚನೆಯು ಈ ಸಂಘಟನೆಗಳ ಬಲವರ್ಧನೆಗೆ 'ಪಡಿ' ಸಂಸ್ಥೆಯು ಪೂರಕ ವಾತಾವರಣ ನಿರ್ಮಾಣ ಮಾಡಿರುವುದು ಮತ್ತು ಗ್ರಾಮ, ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಸಮಿತಿಗಳು ಅಸ್ತಿತ್ವಕ್ಕೆ ಬಂದಿರುವುದು, ಸರಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಮತ್ತು ಮೂಲಭೂತ ಸೌಕರ್ಯಗಳ ಒದಗಣೆಗೆ ಮತ್ತು ಸರಕಾರದೊಂದಿಗೆ ವಕಾಲತ್ತು ಮಾಡುವಲ್ಲಿ ಈ ಸಂಘಟನೆಗಳು ಪ್ರಯತ್ನಪಡುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ. ಈ ಎಲ್ಲಾ ಪ್ರಕ್ರಿಯೆಗಳು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡುವಲ್ಲಿ ಸಹಕಾರಿಯಾಗಬಲ್ಲದು.

ಅಲ್ಲದೇ ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಮೌಲ್ಯಯುತ ಶಿಕ್ಷಣಕ್ಕಾಗಿ ಪಡಿಯು ತನ್ನದೇ ಕಾರ್ಯವ್ಯಾಪ್ತಿಯಲ್ಲಿ ಹಮ್ಮಿಕೊಂಡಂತಹ ಚಟುವಟಿಕೆಗಳು ಪರೋಕ್ಷವಾಗಿ ಮಗುಸ್ನೇಹಿ ವಾತಾವರಣ ನಿರ್ಮಾಣ ಮಾಡಲು ಸಹಕಾರಿಯಾಗಿದೆ. ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟಗಳು ಮತ್ತು ಅದರ ಘಟಕಗಳು ಈ ಪ್ರಕ್ರಿಯೆಯಲ್ಲಿ ತಮ್ಮನ್ನು ತಾವೂ ತೊಡಗಿಸಿಕೊಂಡು ಮಗು ಸ್ನೇಹಿ ವಾತಾವರಣ ನಿರ್ಮಾಣಕ್ಕೆ ನಮ್ಮೊಂದಿಗೆ ಕೈ ಜೋಡಿಸಿವೆ.

ಪಡಿಯ ಈ ಪ್ರಕ್ರಿಯೆಯಲ್ಲಿ ಸಹಕಾರ ನೀಡಿದ ಇಲಾಖೆಗಳು ಮತ್ತು ಸ್ಥಳಿಯ ಆಡಳಿತ ಮತ್ತು ಸಮುದಾಯಗಳಿಗೂ ಕೃತಜ್ಞತೆಯನ್ನು ಸಮರ್ಪಿಸುತ್ತಾ ಮುಂದಿನ ದಿನಗಳಲ್ಲಿ ಮಕ್ಕಳ ಸರ್ವಾಂಗೀಣ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ನಾವೆಲ್ಲರೂ ಜತೆಯಾಗಿ ಶ್ರಮಿಸೋಣ ಮತ್ತು ಮಕ್ಕಳಿಗೆ ಸುಂದರ ಬಾಲ್ಯವನ್ನು ಕಲ್ಪಿಸೋಣ.

ಈ ಸಂಚಿಕೆಯು ಮೂರನೇ ಭಾಗವಾಗಿದ್ದು ಮಗು ಸ್ನೇಹಿ ಶಾಲೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಪಡಿಯು ಕಳೆದ 3 ವರುಷಗಳಿಂದ ಹಲವು ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಾ ಬಂದಿದ್ದು ಕಾರ್ಯವ್ಯಾಪ್ತಿಯ ಶಾಲೆಗಳಲ್ಲಿ ಸಾಕಷ್ಟು ಬದಲಾವಣೆಯನ್ನು ತರುವಲ್ಲಿ ಯಶಸ್ವಿಯಾಗಿದೆ. ಈ ಎಲ್ಲಾ ಪ್ರಕ್ರಿಯೆಯ ದಾಖಲೀಕರಣದ ಮತ್ತು ಮುಂದಿನ ಹಂತಕ್ಕೆ ಪ್ರಸರಣೆ ಮಾಡುವ ಅಂಗವಾಗಿ, ಕಳೆದ 2016 ಎಪ್ರಿಲ್ ನಿಂದ 2017 ಮಾರ್ಚ್ ತಿಂಗಳಲ್ಲಿ ನಡೆದ ಯೋಜನೆಯ ಕಾರ್ಯ ಚಟುವಟಿಕೆಯನ್ನು "ಶಿಕ್ಷಣ ಸಂಚಲನ" ಎಂಬ ಸುದ್ದಿ ಪತ್ರದ ಮೂಲಕ ಹೊರತಂದಿದ್ದೇವೆ.




ಖಾಸಗಿ ಪ್ರಸಾರಕ್ಕಾಗಿ ಮಾತ್ರ

## ಗುಣಾತ್ಮಕ ಶಿಕ್ಷಣಕ್ಕಾಗಿ ಮಕ್ಕಳಸ್ನೇಹಿ ಸಮಾಜ ನಿರ್ಮಾಣ ಪ್ರಕ್ರಿಯೆಯಲ್ಲಿನ ಪಡಿಯ ಹೆಜ್ಜೆಗಳು:

**ಯೋಜನಾ ವ್ಯಾಪ್ತಿಯ ಶಾಲೆಯಲ್ಲಿ ಮಗುಸ್ನೇಹಿ ಶಾಲಾ ವಾತವರಣ ನಿರ್ಮಾಣ ಪ್ರಕ್ರಿಯೆಯ ಹಂತಗಳು:**

ಫಲಿತಾಂಶಾಧಾರಿತ ಚಟುವಟಿಕೆಗಳ ಅನುಷ್ಠಾನ ಪ್ರಕ್ರಿಯೆಯನ್ನು ದತ್ತಾಂಶಗಳ ಮೂಲಕ ವೈಜ್ಞಾನಿಕ ವಿಧಾನಗಳಲ್ಲಿ ಪ್ರತಿ 6 ತಿಂಗಳಿಗೊಮ್ಮೆ ವಿಶ್ಲೇಷಣೆಯನ್ನು ಮಾಡಿ ಪ್ರಗತಿ ಪರಿಶೀಲನೆಯೊಂದಿಗೆ ಮುಂದಿನ ಕಾರ್ಯತಂತ್ರಗಳನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳಲು ಈ ಪ್ರಕ್ರಿಯೆಯು ಸಹಕಾರಿಯಾಗಿದೆ. ಈ ಕೆಳಗಿನ ಕೋಷ್ಟಕವು ಕಳೆದ ಮೂರು ವರ್ಷಗಳ ಮಗುಸ್ನೇಹಿ ಶಾಲಾ ಪ್ರಕ್ರಿಯೆಯ ಬೆಳವಣಿಗೆಯನ್ನು ತೋರಿಸಲಾಗಿದೆ.ಆಯ್ಕೆ ಮಾಡಿದ ಶಾಲೆಗಳು ಒಂದನೆ ಭಾಗದಲ್ಲಿ ನಮ್ಮ ಸೂಚ್ಯಂಕದ ಪ್ರಕಾರ ತೃಪ್ತಿಕರವಾಗಿಲ್ಲದೆ ಇದ್ದು 6ನೇ ಹಂತದಲ್ಲಿ 24 ಶಾಲೆಗಳು ಮಗು ಸ್ನೇಹಿ ಶಾಲಾ ಸೂಚ್ಯಂಕದ ಪ್ರಕಾರ ಉತ್ತಮ ಮತ್ತು ಅತ್ಯುತ್ತಮ ಹಂತಕ್ಕೆ ತಲುಪಿವೆ. ಈ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಡಯಟ್‌ನ ಹಿರಿಯ ಉಪನ್ಯಾಸಕರು ಭಾಗವಹಿಸಿದ್ದರು.




### I ಮಗು ಸ್ನೇಹಿ ಶಾಲೆ ಮತ್ತು ಮಗುಸ್ನೇಹಿ ಪಂಚಾಯತುಗಳು ಅನುಷ್ಠಾನಕ್ಕಾಗಿ ಕೈಗೊಂಡ ಕಾರ್ಯಕ್ರಮಗಳು:

#### ಅ. ಮೀನಾ ಕ್ಲಬ್ ಮತ್ತು ಮಕ್ಕಳ ಹಕ್ಕುಗಳ ಕ್ಲಬ್‌ಗಳ ಬಲವರ್ಧನೆಗೆ ಚಟುವಟಿಕೆಗಳು.

ಶಾಲಾ ಹಂತದಲ್ಲಿ ಮಕ್ಕಳಲ್ಲಿ ಪರಿಣಾಮಕಾರಿ ಬದಲಾವಣೆಗೆ ಕಾರಣವಾಗುವ ಮತ್ತು ಮಕ್ಕಳಲ್ಲಿ ಪ್ರಜಾಪ್ರಭುತ್ವ ಮಾದರಿಯ ನಾಯಕತ್ವ, ವ್ಯಕ್ತಿತ್ವದ ಬೆಳವಣಿಗೆಯನ್ನು ರೂಪಿಸಲು ಸಹಕಾರಿಯಾಗಬಲ್ಲ ಪ್ರಮುಖ ಕ್ಲಬ್‌ಗಳಾದ ಮೀನಾ ಮತ್ತು ಮಕ್ಕಳ ಹಕ್ಕುಗಳ ಕ್ಲಬ್‌ಗಳು ನಿರಂತರ ವಾರ್ಷಿಕ ಕ್ರಿಯಾ ಚಟುವಟಿಕೆಯನ್ನು ರೂಪಿಸಿ ಪ್ರತಿ ತಿಂಗಳ ಕಾರ್ಯ ಚಟುವಟಿಕೆಯನ್ನು ಕಾರ್ಯಗತಗೊಳಿಸುವಲ್ಲಿ ಮಕ್ಕಳು ಸ್ವತಂತ್ರ್ಯವಾಗಿ ಕೆಲಸ ಮಾಡುತ್ತಿದ್ದಾರೆ. ಮಕ್ಕಳಿಗೆ ಮಕ್ಕಳ ಹಕ್ಕುಗಳ ಅರಿವು ಮೂಡುವುದರೊಂದಿಗೆ ತಮ್ಮ ಶಾಲಾ ವ್ಯಾಪ್ತಿಯಲ್ಲಿ ಮಕ್ಕಳ ಹಕ್ಕುಗಳ ಉಲ್ಲಂಘನೆಯಾದಲ್ಲಿ ಮಕ್ಕಳೆ ಸೂಕ್ತ ಪ್ರಾಧಿಕಾರಗಳ ಮೂಲಕ ಪರಿಹಾರವನ್ನು ಕಂಡುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಈ ಒಂದು ಪ್ರಯತ್ನವು ಶಾಲೆಗಳಲ್ಲಿ ಮಕ್ಕಳ ಭಾಗವಹಿಸುವಿಕೆಯ ಹಕ್ಕನ್ನು ಬಲಪಡಿಸುತ್ತಿದೆ. ಮಕ್ಕಳಿಗೆ ಶಾಲೆಗಳಲ್ಲಿ ಪ್ರಜಾಪ್ರಭುತ್ವ ಮಾದರಿಯ ವ್ಯವಸ್ಥೆಯ ಪರಿಚಯವನ್ನು ಮಾಡುವ ಜತೆಗೆ ಸಹಕಾರ, ಸಹಬಾಳ್ವೆ ತತ್ವಗಳನ್ನು ಅವರ ಜೀವನದಲ್ಲಿ ಅಳವಡಿಸಿಕೊಳ್ಳಲು ನೆರವಾಗುತ್ತಿದೆ.

ಶಾಲಾ ಹಂತದಲ್ಲಿ ಮಕ್ಕಳ ಹಕ್ಕುಗಳ ಕ್ಲಬ್ ಮತ್ತು ಮೀನಾ ಕ್ಲಬ್‌ಗಳು ತಮ್ಮ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಹಮ್ಮಿಕೊಂಡ ಚಟುವಟಿಕೆಗಳಲ್ಲಿ ಈ ಕೆಳಗಿನ ಕಾರ್ಯಕ್ರಮಗಳನ್ನು ಸ್ವತಂತ್ರ್ಯವಾಗಿ ನಡೆಸಿದ್ದಾರೆ.

- ದೀರ್ಘ ಗೈರು ಹಾಜರಾದ ಮಕ್ಕಳ ಮನೆ ಭೇಟಿ ಮಾಡಿ ಮಗುವನ್ನು ಮರಳಿ ಶಾಲೆಗೆ ಸೇರಿಸಿರುವುದು.
- ಬಾಲ ಕಾರ್ಮಿಕ ಪದ್ಧತಿ ವಿರೋಧಿ ಅರಿವಿನ ಕಾರ್ಯಕ್ರಮ
- ರಾಷ್ಟ್ರೀಯ ಹಬ್ಬಗಳ ಆಚರಣೆ
- ವನಮಹೋತ್ಸವ ಕಾರ್ಯಕ್ರಮ
- ವಾಚಕರ ಸಪ್ತಾಹ
- ಪ್ರಥಮ ಚಿಕಿತ್ಸಾ ತರಬೇತಿ ಕಾರ್ಯಕ್ರಮ
- ಸ್ವಚ್ಛತಾ ಅಭಿಯಾನ

#### ಆ) ಮಗುಸ್ನೇಹಿ ಶಾಲೆ ಮತ್ತು ಮಗುಸ್ನೇಹಿ ಪಂಚಾಯತಿನ ಪರಿಣಾಮಕಾರಿ ಅನುಷ್ಠಾನಕ್ಕಾಗಿ ನಾಗರಿಕ ಸೌಕರ್ಯ ಸಮಿತಿಯನ್ನು ಕ್ರಿಯಾತ್ಮಕಗೊಳಿಸಿರುವುದು.

ಪಂಚಾಯತಿನ ಸ್ಥಾಯಿ ಸಮಿತಿಗಳಲ್ಲಿ ಒಂದಾದ ನಾಗರಿಕ ಸೌಕರ್ಯ ಸಮಿತಿಯು ಪಂಚಾಯತ್‌ರಾಜ್ ಅಧಿನಿಯಮ, 1993 ಅನುಸೂಚಿ1ರ 13ನೇ ಖಂಡದಲ್ಲಿ ನಿರ್ದಿಷ್ಟಪಡಿಸಿದ ಪ್ರಕಾರ್ಯಗಳ ಮುಂದುವರಿಕೆಯಾಗಿ ಶಾಲಾ ಎಸ್.ಡಿ.ಎಮ್.ಸಿಯ ರಚನೆ ಮತ್ತು ಅದರ ಮೇಲ್ವಿಚಾರಣೆಯ ಜವಬ್ದಾರಿಯು ಒಂದು ಮತ್ತು ಶಾಲೆಗಳ ಅಭಿವೃದ್ಧಿಯಲ್ಲಿಯೂ, ಮತ್ತು ಮಾಹಿತಿ ವಿನಿಮಯ ಮತ್ತು ಸಮನ್ವಯತೆಯ ಉದ್ದೇಶಕ್ಕಾಗಿ ಶೈಕ್ಷಣಿಕ ವರ್ಷದಲ್ಲಿ ಕನಿಷ್ಟ ಪಕ್ಷ 3 ತಿಂಗಳಿಗೊಮ್ಮೆ ಎಸ್.ಡಿ.ಎಮ್.ಸಿ ಪದಾಧಿಕಾರಿಗಳ ಜಂಟಿ ಸಭೆಯನ್ನು ರಚಿಸಬೇಕು ಎಂಬುದರ ಬಗ್ಗೆ ಸರಿಯಾದ ಮಾಹಿತಿಯೇ ನಾಗರಿಕ ಸೌಕರ್ಯ ಸಮಿತಿಯ ಸದಸ್ಯರಿಗೆ ಅರಿವಿರಲಿಲ್ಲ. ಕೇವಲ ಸಮಿತಿಯು ರಚನೆಯಾಗಿದ್ದು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಾ ಇರಲಿಲ್ಲ. ಈ ಎಲ್ಲ ವಸ್ತುಸ್ಥಿತಿಗಳ ವಿಶ್ಲೇಷಣೆ ಪಡಿಗೆ ಹೊಸ ಕಾರ್ಯತಂತ್ರವನ್ನು ಅಳವಡಿಸಿಕೊಳ್ಳಲು ಸಹಾಯಕವಾಯಿತು. ಅದ್ದರಿಂದ ಪಡಿಯು ತನ್ನ ಯೋಜನಾ ವ್ಯಾಪ್ತಿಯ ಪಂಚಾಯತು ಮತ್ತು ಶಾಲೆಗಳ ನಡುವಿನ ಅಂತರವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

#### ಇ) ನಾಗರಿಕ ಸೌಕರ್ಯ ಸಮಿತಿಗೆ ತರಬೇತಿ:

ದ.ಕ. ಮತ್ತು ಉಡುಪಿ ಜಿಲ್ಲೆಯ ಯೋಜನಾ ವ್ಯಾಪ್ತಿಯ 8 ಪಂಚಾಯತು ವ್ಯಾಪ್ತಿಯಲ್ಲಿ ಪಂಚಾಯತಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಾಗರಿಕ ಸೌಕರ್ಯ ಸಮಿತಿಯ ಸದಸ್ಯರಿಗೆ

ಅವರ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು ಮತ್ತು ಯೋಜನಾ ವ್ಯಾಪ್ತಿಯ ಪಂಚಾಯತು ಸದಸ್ಯರಿಗೆ ತರಬೇತಿ ನೀಡುವುದರೊಂದಿಗೆ ಅವರ ಮೂಲಕ ಶಾಲೆಗಳ ಮೇಲ್ವಿಚಾರಣೆ ನಡೆಸುವುದು, ಸ್ಥಳೀಯ ಸರಕಾರದ ಪಾತ್ರವನ್ನು ಮನದಟ್ಟು ಮಾಡಲಾಯಿತು.



ನಾಗರಿಕ ಸೌಕರ್ಯ ಸಮಿತಿಗೆ ತರಬೇತಿ:

### ಈ) ನಾಗರಿಕ ಸೌಕರ್ಯ ಸಮಿತಿ ನೇತೃತ್ವದಲ್ಲಿ ಎಸ್‌ಡಿಎಮ್‌ಸಿ ತರಬೇತಿ:

ಯೋಜನಾ ವ್ಯಾಪ್ತಿಯ ಶಾಲೆಗಳ ಎಸ್.ಡಿ.ಎಮ್.ಸಿ ಸದಸ್ಯರಿಗೆ ಅವರ ಕರ್ತವ್ಯ ಮತ್ತು ಜವಾಬ್ದಾರಿಗಳ ಬಗ್ಗೆ ತರಬೇತಿಯನ್ನು ಆಯಾಯ ತಾಲೂಕುಗಳ ಶಾಲೆಗಳಲ್ಲಿ ನಾಗರಿಕ ಸೌಕರ್ಯ ಸಮಿತಿಯ ನೇತೃತ್ವದಲ್ಲಿ ಪಡಿಯು ಆಯೋಜಿಸಿತು. ತರಬೇತಿಯಲ್ಲಿ ಎಸ್‌ಡಿಎಮ್‌ಸಿ ಸದಸ್ಯರಿಗೆ ಶಾಲಾ ಅಭಿವೃದ್ಧಿ ಯೋಜನೆಯನ್ನು ತಯಾರು ಮಾಡುವಲ್ಲಿ ಯಾವೆಲ್ಲ ಅಂಶಗಳು ಒಳಗೊಂಡಿರಬೇಕು ಮತ್ತು ಸಮಿತಿಗಳ ಪಾತ್ರ, ಕರ್ತವ್ಯಗಳು ಮತ್ತು ಜವಾಬ್ದಾರಿಗಳ ಕುರಿತಂತೆ ತರಬೇತಿ ನೀಡಲಾಯಿತು. ಮಗುಸ್ನೇಹಿ ಶಾಲಾ ವಾತಾವರಣ ರೂಪಿಸುವಲ್ಲಿ ಎಸ್‌ಡಿಎಮ್‌ಸಿ ಅನುಸರಿಸಬೇಕಾದ ವಿಷಯಗಳ ಕುರಿತಂತೆ ಮತ್ತು ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಶಾಲಾ ಸುರಕ್ಷಾ ಸಮಿತಿಯ ರಚನೆ ಮತ್ತು ಕರ್ತವ್ಯಗಳ ತರಬೇತಿ ನೀಡಲಾಯಿತು.



ಎಸ್.ಡಿ.ಎಂ.ಸಿ ತರಬೇತಿ

**ಮಗುಸ್ನೇಹಿ ಶಾಲೆ ಮತ್ತು ಮಗುಸ್ನೇಹಿ ಪಂಚಾಯತುಗಳಲ್ಲಿ ಕಂಡು ಬಂದಂತಹ ಪರಿಣಾಮಕಾರಿ ಬದಲಾವಣೆಗಳು.**

- ❖ ಮೀನಾ ಮತ್ತು ಮಕ್ಕಳ ಹಕ್ಕುಗಳ ಕ್ಲಬ್‌ನಲ್ಲಿ ಚಟುವಟಿಕೆ.
- ❖ ನಾಗರಿಕ ಸೌಕರ್ಯ ಸಮಿತಿಗಳ ನಿರಂತರ ಮೇಲ್ವಿಚಾರಣೆ.
- ❖ ಎಸ್‌ಡಿಎಮ್‌ಸಿ ಶಾಲಾ ಅಭಿವೃದ್ದಿ ಮತ್ತು ಮೇಲುಸ್ತುವಾರಿ ಕುರಿತಂತೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ.
- ❖ ಬಿಸಿಯೂಟದ ಪರಿಣಾಮಕಾರಿ ಮೇಲ್ವಿಚಾರಣೆ.
- ❖ ಶಿಕ್ಷೆ ರಹಿತ ಶಿಕ್ಷಣಕ್ಕೆ ಪ್ರೋತ್ಸಾಹ

### ಉ) ಶಿಕ್ಷಣ ಹಕ್ಕು ಕೋಶ:

ಶಿಕ್ಷಣ ಹಕ್ಕು ಕೋಶವು ಉಡುಪಿ ಮತ್ತು ದ.ಕ ಜಿಲ್ಲೆಯ ಎಲ್ಲಾ ತಾಲೂಕಿನಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ರಚನೆಯಾಗಿದ್ದು, ಕಳೆದ 3 ವರ್ಷಗಳಲ್ಲಿ ಶಿಕ್ಷಣ ಹಕ್ಕು ಕಾಯಿದೆ ಮತ್ತು ಅದರ ಅನುಷ್ಠಾನದಲ್ಲಿ ಉದ್ಭವಿಸುವ ಸಮಸ್ಯೆಗಳ ಕುರಿತು ದೂರು ವಿಲೇವಾರಿ ನಡೆಸುತ್ತಿದೆ. ಈ ಕೋಶದ ಕಾರ್ಯ ಚಟುವಟಿಕೆಯ ಬಗ್ಗೆ ಪರಾಮರ್ಶನಾ ಸಭೆಯನ್ನು ಎಲ್ಲಾ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ನೇತೃತ್ವದಲ್ಲಿ ನಡೆಸಲಾಯಿತು. ಈ ಸಭೆಯಲ್ಲಿ ಶಿಕ್ಷಣ ಹಕ್ಕು ಕೋಶಗಳ ಚಟುವಟಿಕೆಗಳ ವಿಮರ್ಶೆ ಮತ್ತು ಇನ್ನೂ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವುದರ ಬಗ್ಗೆ ಚರ್ಚಿಸಲಾಯಿತು.

### ಊ) ಶಿಕ್ಷಣ ಹಕ್ಕು ಕಾಯಿದೆ ಮತ್ತು ಮಕ್ಕಳ ಸುರಕ್ಷತೆ ಕುರಿತಂತೆ ಚಿಂತನಾ ಸಭೆ:

ಪಡಿ ಮಂಗಳೂರು ಮತ್ತು ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ(ರಿ) ದ.ಕ ಮತ್ತು ಚೈಲ್ಡ್‌ಲೈನ್ ಮಂಗಳೂರು ಮತ್ತು ಸ್ಕೂಲ್ ಆಫ್ ಸೋಶಿಯಲ್ ವರ್ಕ್, ರೋಶನಿ ನಿಲಯ ಇವರ ಸಹಯೋಗದೊಂದಿಗೆ ಶಿಕ್ಷಣ ಹಕ್ಕು ಕೋಶ ಮತ್ತು ಮಕ್ಕಳ ಸುರಕ್ಷತೆ ಕುರಿತಂತೆ ಚಿಂತನಾ ಸಭೆಯನ್ನು ದಿನಾಂಕ 30.06.2016ರಂದು ರೋಶನಿ ನಿಲಯದಲ್ಲಿ ನಡೆಯಿತು. ಸಭೆಯಲ್ಲಿ



ಶಿಕ್ಷಣ ಹಕ್ಕು ಕಾಯಿದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಚಿಂತನಾ ಸಭೆ

ವಿವಿಧ ಸಮುದಾಯಾಧಾರಿತ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಸರಕಾರೇತರ ಸಂಸ್ಥೆಗಳ ಪ್ರತಿನಿಧಿಗಳು, ಪೋಲಿಸ್ ಇಲಾಖೆಯ ಪ್ರತಿನಿಧಿಗಳು ಭಾಗವಹಿಸಿದ್ದು, ಸಭೆಯಲ್ಲಿ ಕುಂದಾಪುರದಲ್ಲಿ ನಡೆದ ಶಾಲಾ ವಾಹನ ಅಪಘಾತದಲ್ಲಿ ದುರ್ಮರಣ ಅಪ್ಪಿದ ಮಕ್ಕಳನ್ನು ಸ್ಮರಿಸುತ್ತಾ ಸಮಾಜದಲ್ಲಿ ಇಷ್ಟೊಂದು ವ್ಯವಸ್ಥೆಗಳಿದ್ದರೂ ಮಕ್ಕಳ ರಕ್ಷಣೆ ಮತ್ತು ಪೋಷಣೆಯಲ್ಲಿನ ಪ್ರಕ್ರಿಯೆಯಲ್ಲಿ ಇಂತಹ ದುರ್ಘಟನೆಗಳು ನಡೆಯುತ್ತಾ ಇರುವುದೂ ನಾಗರಿಕ ಸಮಾಜ ತಲೆ ತಗ್ಗಿಸುವಂತಹ ವಿಚಾರವಾಗಿದ್ದು ಇನ್ನೂ ಕೂಡಾ ಇಲಾಖೆಗಳು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳದಿರುವುದು ಖೇದಕರ ಮತ್ತು ಇದು ಶಿಕ್ಷಣ ಹಕ್ಕು ಕಾಯಿದೆಯ ಸ್ಪಷ್ಟ ಉಲ್ಲಂಘನೆಯಾಗಿದೆ ಎಂಬುದು ಸಭೆಯಲ್ಲಿ ನಿರ್ಣಯಿಸಲಾಯಿತು. ಅಲ್ಲದೆ ಮಕ್ಕಳ ರಕ್ಷಣಾ ನೀತಿ 2016ರ ಕುರಿತಂತೆ ಮತ್ತು ಮಕ್ಕಳ ಶಿಕ್ಷಣ ಹಕ್ಕು ಕಾಯಿದೆಯ ಪರಿಣಾಮಕಾರಿ ಅನುಷ್ಠಾನದ ಬಗ್ಗೆ ಚರ್ಚಿಸಲಾಯಿತು. ಅಲ್ಲದೆ ವ್ಯವಸ್ಥೆಗಳು ಸರಿಯಾದ ರೀತಿಯಲ್ಲಿ ಕಾರ್ಯ ನಿರ್ವಹಿಸುವಂತಾಗಲು ಸಭೆಯಲ್ಲಿ ಹಲವು ಹಕ್ಕೊತ್ತಾಯಗಳನ್ನು ಮಾಡುವ ಕುರಿತು ನಿರ್ಣಯಿಸಲಾಯಿತು ಮತ್ತು ಜಿಲ್ಲಾಧಿಕಾರಿಗೆ ಮನವಿಯನ್ನು ಸಲ್ಲಿಸಲಾಯಿತು.

### ಋ) ಡಯಟ್‌ನೊಂದಿಗೆ ಸಮಾಲೋಚನಾ ಸಭೆ:

'ಪಡಿ'ಯ ಯೋಜನಾ ವ್ಯಾಪ್ತಿಯ ಮಗು ಸ್ನೇಹಿ ಶಾಲೆಯ ಪ್ರಗತಿ ಪರಿಶೀಲನೆ ಕುರಿತಂತೆ ಡಯಟ್‌ನೊಂದಿಗೆ ಮೌಲ್ಯಮಾಪನ ಮಾಡಿದ ನಂತರ ಕಂಡುಕೊಂಡ ಅಂಶಗಳನ್ನು ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ಸಾಧ್ಯ ಸಾಧ್ಯತೆಗಳ ಕುರಿತು 16.07.2016 ರಂದು ಡಯಟ್ ಸಭಾಂಗಣದಲ್ಲಿ ಚರ್ಚಿಸಲಾಯಿತು. ಸಭೆಯಲ್ಲಿ ಡಯಟ್‌ನ ಪ್ರಾಂಶುಪಾಲರು ಮತ್ತು ಉಪನ್ಯಾಸಕ ವೃಂದದವರು ಉಪಸ್ಥಿತರಿದ್ದರು ಮತ್ತು ಶಾಲೆಗಳಲ್ಲಿ ಭೇಟಿ ನೀಡಿದ ಸಂದರ್ಭದಲ್ಲಿ ಕಂಡುಕೊಂಡ ವಿಚಾರಗಳು ಮತ್ತು ಸಮಸ್ಯೆಗಳನ್ನು ಚರ್ಚಿಸಲಾಯಿತು ಅಲ್ಲದೇ ಮಗು ಸ್ನೇಹಿ ವಾತಾವರಣ ನಿರ್ಮಾಣ ಮಾಡುವಲ್ಲಿ ಪಡಿಯ ಕಾರ್ಯ ಚಟುವಟಿಕೆಗಳಿಗೆ ಸಹಕಾರ ಮತ್ತು ಸಹಯೋಗ ನೀಡುವ ಕುರಿತು ಚರ್ಚಿಸಲಾಯಿತು.



ಡಯಟ್‌ನ ಉಪನ್ಯಾಸಕರೊಂದಿಗೆ ಸಮಾಲೋಚನೆ

### ಎ. ಶಿಕ್ಷಾ ರಹಿತ ಬೋಧನೆಗೆ ಕಾರ್ಯಕ್ರಮಗಳು:

ಎಸ್.ಡಿ.ಎಮ್.ಸಿ ತರಬೇತಿ ಸಂದರ್ಭದಲ್ಲಿ ಮಗು ಸ್ನೇಹಿ ಪರಿಕಲ್ಪನೆಯ ಬಗ್ಗೆ ತರಬೇತಿಯ ಜತೆಗೆ ಶಿಕ್ಷೆ ರಹಿತ ಬೋಧನೆಯ ಮೇಲ್ವಿಚಾರಣೆ ಬಗ್ಗೆ ತರಬೇತಿಯನ್ನು ನೀಡಲಾಯಿತು. ಅಲ್ಲದೇ ಮಕ್ಕಳ ಹಕ್ಕುಗಳ ಕ್ಲಬ್ ಮತ್ತು ಮೀನಾ ಕ್ಲಬ್‌ಗಳಲ್ಲಿ ಮಕ್ಕಳಲ್ಲಿ ಶಿಸ್ತು ಮತ್ತು ನಡವಳಿಕೆಗೆ ಸಂಬಂಧಿಸಿದಂತೆ ತರಬೇತಿಯನ್ನು ನೀಡಲಾಯಿತು ಹಾಗೂ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಹೊರತಂದಿರುವ "ಮನೋದೈಹಿಕ ದಂಡನೆಯನ್ನು ತೊಡೆದು ಹಾಕಲು-ಮಾರ್ಗದರ್ಶಿ ಸೂತ್ರಗಳು" ಎಂಬ ಪುಸ್ತಕವನ್ನು ಕನ್ನಡಕ್ಕೆ ಭಾಷಾಂತರಿಸಿ ಶಿಕ್ಷಕರಿಗೆ ವಿತರಿಸಲಾಯಿತು.

### ಏ. ಅರ್.ಟಿ.ಇ ಮಾಹಿತಿ ಕೇಂದ್ರ :

ಶಿಕ್ಷಣ ಹಕ್ಕು ಕಾಯಿದೆಯಲ್ಲಿನ 25% ದಾಖಲಾತಿ ಪ್ರಕ್ರಿಯೆಯಲ್ಲಿ ಸಾರ್ವಜನಿಕರಿಗೆ ಉದ್ಭವಿಸುವ ಸಮಸ್ಯೆಗಳಿಗೆ ಮಾಹಿತಿ ನೀಡುವ ನಿಟ್ಟಿನಲ್ಲಿ ಮತ್ತು ಸಾರ್ವಜನಿಕರಿಗೆ 2017-18 ಸಾಲಿನ ಪ್ರಕ್ರಿಯೆಯು ಅನ್‌ಲೈನ್ ಮೂಲಕ ನಡೆಸಲಾಗಿದ್ದು, ಅರ್ಹ ವ್ಯಕ್ತಿಗಳಿಗೆ ಈ ಸೌಲಭ್ಯ ದೊರಕಿಸಿ ಕೊಡುವ ಮತ್ತು ದಾಖಲಾತಿ ಪ್ರಕ್ರಿಯೆಯಲ್ಲಿ ಮೂಡುವ ಗೊಂದಲವನ್ನು ನಿವಾರಿಸುವ ನಿಟ್ಟಿನಲ್ಲಿ ಪಡಿಯು ಪ್ರಾಯೋಗಿಕವಾಗಿ ಆರ್.ಟಿ.ಇ. ಮಾಹಿತಿ ಕೇಂದ್ರವನ್ನು ತೆರೆದಿದ್ದು, ದೂರವಾಣಿ ಮೂಲಕ ಮಾಹಿತಿ, ಸಲಹೆ ಮತ್ತು ಮಾರ್ಗದರ್ಶನ ಮತ್ತು 'ಪಡಿ'ಯ ಕಛೇರಿಯಲ್ಲಿ ದಾಖಲಾತಿ ಮಾಡಲು ಅರ್ಜಿಯನ್ನು ಅಂತರ್ಜಾಲದಲ್ಲಿ ಉಚಿತವಾಗಿ ಭರ್ತಿ ಮಾಡಿ ಕೊಡುವ ವ್ಯವಸ್ಥೆಯನ್ನು ಮಾಡಲಾಯಿತು. ಸಾರ್ವಜನಿಕರು ಇದರ ಉಪಯೋಗವನ್ನು ಪಡೆದರು.

### ಐ. ವಕಾಲತ್ತು ಪ್ರಕ್ರಿಯೆ:

ಮಕ್ಕಳ ಶಿಕ್ಷಣ ಮತ್ತು ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದಂತೆ ಉದ್ಭವಿಸುವ ಕೆಲವು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಮತ್ತು ಕೆಲವು ಕಾಯಿದೆಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ಸೂಕ್ತ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಇಲಾಖೆಗಳೊಂದಿಗೆ ವಕಾಲತ್ತನ್ನು ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಸಹಯೋಗದಲ್ಲಿ ನಡೆಸಲಾಯಿತು. ಪ್ರಮುಖವಾಗಿ ಈ ಕೆಳಗಿನ ವಿಚಾರಗಳಲ್ಲಿ ವಕಾಲತ್ತನ್ನು ನಡೆಸಲಾಯಿತು.

- ಹೆಚ್ಚುವರಿ ಶಿಕ್ಷಕರ ವರ್ಗಾವಣೆಗೆ ಸಂಬಂಧಿಸಿದಂತೆ ಉದ್ಭವಿಸಿರುವ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಶಿಕ್ಷಣ ಇಲಾಖೆಯೊಂದಿಗೆ ವಕಾಲತ್ತು.

- ಮಕ್ಕಳ ಗ್ರಾಮ ಸಭೆಗಳನ್ನು ಪರಿಣಾಮಕಾರಿಯಾಗಿ ಎಲ್ಲಾ ಗ್ರಾಮ ಪಂಚಾಯತುಗಳಲ್ಲಿ ನಡೆಸುವ ನಿಟ್ಟಿನಲ್ಲಿ ಜಿಲ್ಲಾ ಪಂಚಾಯತು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗೆ ಮನವಿ.



ಜಿಲ್ಲಾ ಪಂಚಾಯತಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಮನವಿ

- ಹೊಸ ಶಿಕ್ಷಣ ನೀತಿಗೆ ಸಲಹೆ ಮತ್ತು ಅರ್.ಟಿ.ಇಯ 25% ದಾಖಲಾತಿಯಲ್ಲಿ ಉದ್ಭವಿಸುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಶಿಕ್ಷಣ ಇಲಾಖೆಯೊಂದಿಗೆ ಪೂರ್ವಭಾವಿ ಸಮಾಲೋಚನೆ.

- ಶಾಲಾ ಮತ್ತು ಕಾಲೇಜುಗಳಲ್ಲಿ ದಾಖಲಾತಿ ಶುಲ್ಕದ ಮಾಹಿತಿಯನ್ನು ಹೆತ್ತವರಿಗೆ ನೀಡುವ ಕುರಿತಂತೆ ಶಿಕ್ಷಣ ಇಲಾಖೆ ಹೊರಡಿಸಿರುವ ಸುತ್ತೋಲೆಯ ಉಲ್ಲಂಘನೆ ಕುರಿತಂತೆ ಸೂಕ್ತ ಕ್ರಮಕೈಗೊಳ್ಳುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿಯೊಂದಿಗೆ ವಕಾಲತ್ತು.

- ಮಕ್ಕಳ ಮಾಸೋತ್ಸವ ಕಾರ್ಯಕ್ರಮದಲ್ಲಿ ಕಂಡುಕೊಂಡ ಅಂಶಗಳ, ಸಮಸ್ಯೆಗಳ ಈಡೇರಿಕೆಗಾಗಿ ಮನವಿ.



ಮಕ್ಕಳ ಮಾಸೋತ್ಸವದ ವರದಿ ಮತ್ತು ಮನವಿ ಮಂಡನೆ

## II ಪಡಿ ಮಂಗಳೂರು ಇದರ 2016–17ರ ಯೋಜನಾ ಕಾರ್ಯಗಳು

### 1. ಶಿಕ್ಷಣ ಸಂಪನ್ಮೂಲ ಕೇಂದ್ರಗಳಿಗೆ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಾಗಾರ

ಶಿಕ್ಷಣ ಸಂಪನ್ಮೂಲ ಕೇಂದ್ರವು ಕಳೆದ ಹಲವಾರು ವರ್ಷಗಳಿಂದ ಉಡುಪಿ ಮತ್ತು ದ.ಕ ಜಿಲ್ಲೆಯಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಮೌಲ್ಯಯುತ ಶಿಕ್ಷಣಕ್ಕಾಗಿ ಹೋರಾಟ ನಡೆಸುವ ಸಮುದಾಯಾಧಾರಿತ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಾ ತನ್ನದೇ ಆದ ಕಾರ್ಯಕರ್ತರನ್ನು ಒಳಗೊಂಡಿದೆ. ಈ ಸಂಸ್ಥೆಯು ತನ್ನದೇ ಆದ ಬೈಲಾ ಮುಖಾಂತರ ಕಾರ್ಯನಿರ್ವಹಿಸುತ್ತದೆ. 8 ತಾಲೂಕು ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಕಾರ್ಯಾಕಾರಿ ಸಮಿತಿಗಳಿಗೆ ತಲಾ 2 ತರಬೇತಿಗಳನ್ನು ನೀಡಲಾಗಿದ್ದು. ಶಿಕ್ಷಣ ಸಂಪನ್ಮೂಲ ಕೇಂದ್ರಗಳ ನೂತನ ಸದಸ್ಯರಿಗೆ ಸಂಸ್ಥೆ ನಡೆದು ಬಂದ ದಾರಿ ಹಾಗು ಧ್ಯೇಯೋದ್ದೇಶಗಳ ಬಗ್ಗೆ ಅರಿವು ಮೂಡಿಸಲಾಯಿತು.

ಈ ಕಾರ್ಯಾಗಾರದಲ್ಲಿ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಬಲ ವರ್ಧನೆಯನ್ನು ಹೇಗೆ ಮಾಡಬಹುದು ಮತ್ತು ಸ್ವ ಅವಲಂಬಿತರಾಗಿ ತನ್ನ ಕಾರ್ಯಕ್ರಮಗಳನ್ನು ಮುನ್ನಡೆಸಿಕೊಂಡು ಹೋಗಬೇಕಾದ ನಿಟ್ಟಿನಲ್ಲಿ ಪೂರ್ವ ಯೋಜನೆಯನ್ನು ಮತ್ತು ಆಡಳಿತಾತ್ಮಕವಾಗಿ ಸದೃಡವಾಗಿ ಬೆಳೆಯುವಲ್ಲಿ ಯೋಜನೆಯನ್ನು ರೂಪಿಸಲು ಚರ್ಚೆಯನ್ನು ನಡೆಸಲಾಯಿತು.




ಶಿಕ್ಷಣ ಸಂಪನ್ಮೂಲ ಕೇಂದ್ರಗಳಿಗೆ ಸಾಮರ್ಥ್ಯ ಅಭಿವೃದ್ಧಿ ತರಬೇತಿ

**ಕೆಳಗಿನ ಪ್ರಮುಖ ವಿಚಾರಗಳ ಬಗ್ಗೆ ನಿರ್ಣಯಿಸಲಾಯಿತು.**

- ಶಿಕ್ಷಣ ಸಂಪನ್ಮೂಲ ಕೇಂದ್ರವನ್ನು ಆಡಳಿತಾತ್ಮಕವಾಗಿ ಸದೃಡವಾಗಿ ಬೆಳೆಯುವಲ್ಲಿ ಯೋಜನೆಯನ್ನು ಕೈಗೆತ್ತಿಕೊಳ್ಳುವುದು.
- ಪ್ರತಿ ತಾಲೂಕಿನ ಕಾರ್ಯಕಾರಿ ಸಮಿತಿಗೆ ಶಿಕ್ಷಣ ಸಂಪನ್ಮೂಲ ಕೇಂದ್ರವು ಆರ್ಥಿಕವಾಗಿ ಸಬಲವಾಗಲು ಬೇಕಾದ ತರಬೇತಿ
- ಅಭಿವೃದ್ಧಿಪಡಿಸಿದ ಸ್ವಮೌಲ್ಯಮಾಪನದ ಆಧಾರದಲ್ಲಿ ಶಿಕ್ಷಣ ಸಂಪನ್ಮೂಲ ಕೇಂದ್ರದ ಕಾರ್ಯನಿರ್ವಹಣೆಯನ್ನು ಮೌಲ್ಯಮಾಪನ ಮತ್ತು ಉತ್ತಮಪಡಿಸುವ ಕುರಿತು ಚರ್ಚೆ
- ಸರಕಾರಿ ಇಲಾಖೆಗಳೊಂದಿಗೆ ಮಕ್ಕಳ ಸಂಬಂಧಿ ವಿಚಾರಗಳ ಕುರಿತಂತೆ ನಿರಂತರ ವಕಾಲತ್ತು ನಡೆಸುವ ಕುರಿತು.
- ಕೇಂದ್ರವು ಬೈಲಾದ ಪ್ರಕಾರ ಕಾರ್ಯ ನಿರ್ವಹಿಸುವಲ್ಲಿ ತರಬೇತಿ.
- ಸರಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣಕ್ಕಾಗಿ ಪ್ರಯತ್ನ.

### 2. ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟಗಳಿಗೆ ತರಬೇತಿ :

ಉಡುಪಿ ಮತ್ತು ದ.ಕ ಜಿಲ್ಲೆಯ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟಗಳಿಗೆ ತರಬೇತಿ ಕಾರ್ಯಾಗಾರವನ್ನು ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಕಾರ್ಯಕಾರಿ ಸಮಿತಿಯ ನೂತನ ಸದಸ್ಯರಿಗೆ ಸಂಸ್ಥೆ ನಡೆದುಬಂದ ದಾರಿ ಮತ್ತು ಧ್ಯೇಯೋದ್ಧೇಶಗಳ ಬಗ್ಗೆ ಅರಿವು ಮೂಡಿಸಲಾಯಿತು.

ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಮೇಲ್ವಿಚಾರಣೆ ಮಾಡುವ ಬಗ್ಗೆ ತರಬೇತಿ ಜಿಲ್ಲಾ ಶಿಕ್ಷಣ ಸಂಪನ್ಮೂಲ ಕೇಂದ್ರಗಳನ್ನು ಆಡಳಿತಾತ್ಮಕವಾಗಿ ಸದೃಢರಾಗಿ ಬೆಳೆಯುವಲ್ಲಿ ಯೋಜನೆಯನ್ನು ಕೈಗೆತ್ತಿಕೊಳ್ಳುವುದರ ಜತೆಗೆ ಸಂಪನ್ಮೂಲ ಕ್ರೂಢಿಕರಣದ ಕುರಿತಾಗಿ ತರಬೇತಿ ನೀಡಲಾಯಿತು.



ಒಕ್ಕೂಟಗಳಿಗೆ ಸಾಮರ್ಥ್ಯ ಅಭಿವೃದ್ಧಿ ತರಬೇತಿ

### 3. ತರಬೇತುದಾರರ ಮೌಲ್ಯಮಾಪನ:

ಉಡುಪಿ ಮತ್ತು ದ.ಕ ಜಿಲ್ಲೆಯ ಶಿಕ್ಷಣ ಸಂಪನ್ಮೂಲ ಕೇಂದ್ರದ ತರಬೇತುದಾರರ ಮೌಲ್ಯಮಾಪನ ನಡೆಸಲಾಯಿತು. ನವಂಬರ್ 27ರಂದು ಜಿಲ್ಲಾ ಶಿಕ್ಷಣ ಸಂಪನ್ಮೂಲ ಕೇಂದ್ರ ಉಡುಪಿಯ ಸಭಾಂಗಣದಲ್ಲಿ ಮತ್ತು ನವಂಬರ್ 28ರಂದು ಪಡಿ ಸಂಸ್ಥೆ ಮಂಗಳೂರು ಇಲ್ಲಿಯ ಸಭಾಂಗಣದಲ್ಲಿ ನಡೆಯಿತು. ಒಟ್ಟು 60. ಸಂಪನ್ಮೂಲ ವ್ಯಕ್ತಿಗಳು ತಾವು ಪಡೆದುಕೊಂಡ ವಿಷಯವಾರು ತರಬೇತಿಯನ್ವಯ ವಿಷಯ ಮಂಡನೆ ಮಾಡಲಾಯಿತು. ಮೌಲ್ಯಮಾಪನ ಪ್ರಕ್ರಿಯೆಯಲಿ ್ಲ10 ಮಾನದಂಡಗಳನ್ನೊಳಗೊಂಡಂತೆ ಸಂಪನ್ಮೂಲ ವ್ಯಕ್ತಿಗಳನ್ನು ವಿಶ್ಲೇಷಣೆ ಮಾಡಲಾಯಿತು. ವಿಷಯ ಮಂಡನೆ ಮೂಲಕ



ತರಬೇತುದಾರರಿಂದ ವಿಷಯ ಮಂಡನೆ ಮತ್ತು ಮೌಲ್ಯಮಾಪನ

ಒಟ್ಟು 4 ಸಂಪನ್ಮೂಲ ವ್ಯಕ್ತಿಗಳು ಪೋಕ್ಸೋ, ಆರ್.ಟಿ.ಇ ಉಲ್ಲಂಘನೆ ಮತ್ತು ಕೌಟುಂಬಿಕ ದೌರ್ಜನ್ಯಕ್ಕೆ ಸಂಬಂಧಪಟ್ಟಂತೆ ಒಟ್ಟು 4 ಪ್ರಕರಣಗಳನ್ನು ಕಂಡುಹುಡುಕಿ, ಸಂಬಂಧಪಟ್ಟ ಪ್ರಾಧಿಕಾರದ ಮೂಲಕ ಪ್ರಕರಣವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಹೀಗೆ ಸಂಪನ್ಮೂಲ ವ್ಯಕ್ತಿಗಳು ದ.ಕ ಮತ್ತು ಉಡುಪಿ ಜಿಲ್ಲೆಯ ತಳಮಟ್ಟದಲ್ಲಿ ಬೇರೆ ಬೇರೆ ಗುಂಪಿಗೆ ಉದಾ: ಮಕ್ಕಳು, ಎಸ್.ಡಿ.ಎಂ.ಸಿ, ಗ್ರಾಮ ಪಂಚಾಯತ್ ಸದಸ್ಯರು, ಪೋಷಕರು, ಶಿಕ್ಷಕರು, ಇಲಾಖಾ ಸಿಬ್ಬಂದಿ ವರ್ಗದವರಿಗೆ ಹಾಗು ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳಿಗೆ ತರಬೇತಿ/ ಮಾಹಿತಿಯನ್ನು ನೀಡುವುದರೊಂದಿಗೆ ಯಶಸ್ವಿಯಾಗಿರುತ್ತಾರೆ.

### 4. ಮೀನಾ ಮತ್ತು ಮಕ್ಕಳ ಹಕ್ಕುಗಳ ಕ್ಲಬ್‌ಗಳ ಸಮಾಲೋಚನಾ ಸಭೆ.

ಉಡುಪಿ ಮತ್ತು ದ.ಕ ಜಿಲ್ಲೆಯ ಯೋಜನಾ ವ್ಯಾಪ್ತಿಯ 24 ಶಾಲೆಗಳ ಮಕ್ಕಳ ಹಕ್ಕುಗಳ ಕ್ಲಬ್ ಮತ್ತು ಮೀನಾ ಕ್ಲಬ್‌ನ ಸದಸ್ಯರನ್ನೊಳಗೊಂಡಂತೆ ಸಮಾಲೋಚನಾ ಸಭೆಯನ್ನು ನಡೆಸಿ ಮಕ್ಕಳ ಹಕ್ಕುಗಳ ಕ್ಲಬ್‌ಗಳು ಮತ್ತು ಮೀನಾ ಕ್ಲಬ್‌ಗಳು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವ ಕುರಿತಂತೆ ಚರ್ಚಿಸಲಾಯಿತು. ಮಕ್ಕಳ ಸರ್ವತೋಮುಖ ಅಭಿವೃದ್ಧಿಯ ನಿಟ್ಟಿನಲ್ಲಿ ಮಕ್ಕಳ ಈ ಕ್ಲಬ್‌ಗಳು ನಿರಂತರವಾಗಿ ಚಟುವಟಿಕೆಯಿಂದ ಇರಲು ಪೂರಕವಾಗುವಂತೆ ಮಕ್ಕಳಲ್ಲಿ ಅರಿವನ್ನು ಮೂಡಿಸಲಾಯಿತು.



ಮೀನಾ ಮತ್ತು ಮಕ್ಕಳ ಹಕ್ಕುಗಳ ಕ್ಲಬ್‌ಗಳೊಂದಿಗೆ ಸಮಾಲೋಚನಾ ಸಭೆ

### 5. ಉದ್ದೇಶಿತ ಗುಂಪುಗಳೊಂದಿಗೆ (target group) ಸಮಾಲೋಚನಾ ಸಭೆ:

ದ.ಕ ಮತ್ತು ಉಡುಪಿ ಜಿಲ್ಲೆಯ ಎಸ್.ಡಿ.ಎಮ್.ಸಿ, ಶಿಕ್ಷಕರು, ಮತ್ತು ಪಂಚಾಯತು ಸದಸ್ಯರುಗಳೊಂದಿಗೆ ಮಗು ಸ್ನೇಹಿ ಶಾಲೆ



ಮತ್ತು ಮಗು ಸ್ನೇಹಿ ಪಂಚಾಯತು ಪರಿಕಲ್ಪನೆಯ ಅನುಷ್ಠಾನದ ಕುರಿತಂತೆ ಮತ್ತು ಪ್ರಗತಿ ಪರಿಶೀಲನೆಗಾಗಿ ಉದ್ದೇಶಿತ ಗುಂಪುಗಳೊಂದಿಗೆ ಸಮಾಲೋಚನಾ ಸಭೆಯನ್ನು 24 ಶಾಲೆ ಮತ್ತು 8 ಪಂಚಾಯತುಗಳಲ್ಲಿ ನಡೆಸಲಾಯಿತು. ಈ ಎಲ್ಲಾ ಉದ್ದೇಶಿತ ಗುಂಪುಗಳ ಕಾರ್ಯವ್ಯಾಪ್ತಿಗಳು ಮತ್ತು ನಿರ್ವಹಿಸಿರುವ ಜವಾಬ್ದಾರಿಗಳು ಮುಂದಿನ ದಿನಗಳಲ್ಲಿ ನಿರ್ವಹಿಸಬೇಕಾದ ಚಟುವಟಿಕೆಗಳ ಬಗ್ಗೆ ಪರಿಣಾಮಕಾರಿ ಅನುಷ್ಠಾನದ ಬಗ್ಗೆ ಚರ್ಚಿಸಲಾಯಿತು.

### 6. ಮಾದರಿ ಸಮೂಹ ಸಂಪನ್ಮೂಲ ಕೇಂದ್ರದ ಸಮಾಲೋಚನಾ ಸಭೆ:

ಬಂಟ್ವಾಳ ತಾಲೂಕಿನ ಮಧ್ವ ಕ್ಲಸ್ಟರ್‌ನ್ನು ಮಾದರಿ ಸಮೂಹ ಸಂಪನ್ಮೂಲ ಕೇಂದ್ರವನ್ನಾಗಿ ರೂಪಿಸುವ ನಿಟ್ಟಿನಲ್ಲಿ ಇಲಾಖೆಗಳೊಂದಿಗೆ ಸಮಾಲೋಚನಾ ಸಭೆಯನ್ನು ನಡೆಸಲಾಯಿತು. ಮಧ್ವ ಸಮೂಹ ಸಂಪನ್ಮೂಲ ಕೇಂದ್ರ ವ್ಯಾಪ್ತಿಯ ಎಲ್ಲಾ ಶಾಲೆಗಳ ಎಸ್.ಡಿ.ಎಮ್.ಸಿ ಗಳಿಗೆ ತರಬೇತಿ ನೀಡಲಾಯಿತು. ಮಗುಸ್ನೇಹಿ ಶಾಲೆಯ ಸೂಚ್ಯಂಕದ ಅನುಷ್ಠಾನ ತಮ್ಮ ಶಾಲೆಗಳಲ್ಲಿ ನಡೆಸುವ ಕುರಿತಂತೆ ತರಬೇತಿ ನೀಡಲಾಯಿತು. ಮಧ್ವ ಸಮೂಹ ಸಂಪನ್ಮೂಲ ಕೇಂದ್ರದಲ್ಲಿ ಹೋಬಳಿ ಮಟ್ಟದಲ್ಲಿ ಎಸ್.ಡಿ.ಎಮ್.ಸಿ ಸಮನ್ವಯ ಸಮಿತಿ ರಚನೆ ಮತ್ತು ಅದರ ಕರ್ತವ್ಯಗಳ ತರಬೇತಿ ನೀಡಲಾಯಿತು.



ಮಧ್ವ ಸಮೂಹ ಸಂಪನ್ಮೂಲ ಕೇಂದ್ರದಲ್ಲಿ ಸಮಾಲೋಚನಾ ಸಭೆ

### 7. ಮೌಲ್ಯಮಾಪನ:

ಪಡಿ ಸಂಸ್ಥೆ ತನ್ನ ಕಳೆದ 5 ವರ್ಷಗಳ ಕಾರ್ಯ ಚಟುವಟಿಕೆಗಳ ಬಾಹ್ಯ ಮೌಲ್ಯಮಾಪನವನ್ನು ಅಗಸ್ಟ್ ತಿಂಗಳಲ್ಲಿ ಶ್ರೀ ಅರೊಕ್ಯಂ ಮತ್ತು ಶ್ರೀಮತಿ ಮಧುಮಿತರವರು ನಡೆಸಿ ವರದಿಯನ್ನು ನೀಡಿರುತ್ತಾರೆ. ಈ ವರದಿಯು ಪಡಿಯ ಕಾರ್ಯಚಟುವಟಿಕೆಯ ವಸ್ತುನಿಷ್ಠ ಮೌಲ್ಯಮಾಪನ ಹಾಗೂ ಯೋಜನೆಯಲ್ಲಿ ಸಾಧಿಸಿದ ಅಂಶಗಳ ಕುರಿತು ಮತ್ತು ಕಂಡು ಬಂದಂತಹ ಬದಲಾವಣೆಗಳ ಬಗ್ಗೆ ಕ್ಷೇತ್ರ ಭೇಟಿ ಮಾಡಿ ವಿಶ್ಲೇಷಣೆ ನಡೆಸಿರುತ್ತಾರೆ. ಹಾಗೂ ಪಡಿಗೆ ಮುಂದಿನ ಹೆಜ್ಜೆಗಳ ಕುರಿತು ಮತ್ತು ಯಾವ ಎಲ್ಲಾ ಕ್ಷೇತ್ರಗಳಲ್ಲಿ ಪಡಿಯು ಮುಂದಿನ ದಿನಗಳಲ್ಲಿ ಹೆಚ್ಚು ಒತ್ತು ಕೊಟ್ಟು ಕಾರ್ಯ ನಿರ್ವಹಿಸಬಹುದು ಎಂಬುದರ ಕುರಿತು ವಿವರಣಾತ್ಮಕ ವರದಿಯನ್ನು ನೀಡಿದ್ದು ಇದು ಪಡಿಗೆ ಮುಂದಿನ ಕಾರ್ಯ ಯೋಜನೆಗೆ ರೂಪುರೇಷೆಯನ್ನು ನೀಡಲು ಸಹಕಾರಿಯಾಯಿತು.

### 8. ಪೋಕ್ಸೋ ರಾಜ್ಯಮಟ್ಟದ ತರಬೇತಿ:

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಬೆಂಗಳೂರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಪಡಿ ಸಂಸ್ಥೆ ಮಂಗಳೂರು ಇವರ ಜಂಟಿ ಆಶ್ರಯದಲ್ಲಿ ಪೋಕ್ಸೋ ಕಾಯಿದೆಯ ಅನುಷ್ಠಾನ ಮತ್ತು ಸವಾಲುಗಳು ಎಂಬ ವಿಷಯದ ಬಗ್ಗೆ ಎರಡು ದಿನದ ಕಾರ್ಯಾಗಾರವು ಐ.ಎಸ್.ಡಿ. ಸಭಾಂಗಣ ನಂತೂರು ಮಂಗಳೂರು ಇಲ್ಲಿ ಅಕ್ಟೋಬರ್ 27 ಮತ್ತು ಅಕ್ಟೋಬರ್ 28 ರಂದು ರಾಜ್ಯ ಮಟ್ಟದ ಮಕ್ಕಳ ರಕ್ಷಣಾ ವ್ಯವಸ್ಥೆಯಲ್ಲಿ ಪಾಲುದಾರರಾದ ಮಕ್ಕಳ ಕಲ್ಯಾಣ ಸಮಿತಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಚೈಲ್ಡ್ ಲೈನ್, ಬಾಲನ್ಯಾಯ ಮಂಡಳಿಯ ಸದಸ್ಯರು, ಮಕ್ಕಳ ವಿಶೇಷ ಪೋಲೀಸ್ ಘಟಕ, ಮಗುಸ್ನೇಹಿ ಪೋಲೀಸ್ ಅಧಿಕಾರಿ ಮತ್ತು ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳಿಗೆ ನಡೆಸಲಾಯಿತು. ಕಾರ್ಯಾಗಾರದ ಉದ್ಘಾಟನೆಯನ್ನು ಜಿಲ್ಲಾ ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀ ಡಿ.ಟಿ. ಪುಟ್ಟ ರಂಗಸ್ವಾಮಿಯವರು ನಡೆಸಿಕೊಟ್ಟಿದ್ದು ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರಾದ ಡಾ. ಕೃಪಾ ಅಮರ್ ಆಳ್ವ ಇವರು ವಹಿಸಿದ್ದರು. ಒಟ್ಟು 90 ಶಿಬಿರಾರ್ಥಿಗಳು ಬೇರೆ ಬೇರೆ ಜಿಲ್ಲೆಯಿಂದ ಭಾಗವಹಿಸಿದ್ದರು. ಕಾರ್ಯಾಗಾರದಲ್ಲಿ ರಕ್ಷಣಾ ವ್ಯವಸ್ಥೆಗಳನ್ನು ಇನ್ನಷ್ಟು ಬಲವರ್ಧನೆಗೊಳಿಸುವಲ್ಲಿ ಕಾರ್ಯತಂತ್ರಗಳು ಮತ್ತು ಸವಾಲುಗಳನ್ನು ಚರ್ಚಿಸಲಾಯಿತು ಹಾಗೂ ಇದನ್ನು ಹಕ್ಕೊತ್ತಾಯದ ರೂಪದಲ್ಲಿ ಕ್ರೋಢೀಕರಿಸಿ ವಕಾಲತ್ತು ಮಾಡಲು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ ಸಲ್ಲಿಸಲಾಯಿತು.



ಪೋಕ್ಸೋ ರಾಜ್ಯಮಟ್ಟದ ತರಬೇತಿ ಕಾರ್ಯಾಗಾರ

### 9. ಮಕ್ಕಳ ವಿಶೇಷ ಶಿಬಿರ:

ಸ್ಪಂದನ ಸಂಸ್ಥೆ ನೇತೃತ್ವದಲ್ಲಿ ಅವರ ಸಂಸ್ಥೆಯ 8ನೇ, 9ನೇ ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೆ ಪಡಿಯು 7 ದಿನಗಳ ತರಬೇತಿಯನ್ನು ವಿವಿಧ ವಿಷಯಗಳಲ್ಲಿ ನೀಡಲಾಯಿತು ಮುಖ್ಯವಾಗಿ ಮಕ್ಕಳಲ್ಲಿ ನಾಯಕತ್ವ, ವೃತ್ತಿ ಮಾರ್ಗದರ್ಶನ, ಜೀವನಕೌಶಲ್ಯ, ವೈಜ್ಞಾನಿಕ ಮನೋಭಾವ, ಸಾಮಾಜಿಕ ವಿಶ್ಲೇಷಣೆ, ವ್ಯಕ್ತಿತ್ವ ವಿಕಸನ ಮುಂತಾದ ವಿಚಾರಗಳಲ್ಲಿ ತರಬೇತಿ ನೀಡಲಾಯಿತು. ಸುಮಾರು 250 ವಿದ್ಯಾರ್ಥಿಗಳು ತರಬೇತಿಯಲ್ಲಿ ಪಾಲ್ಗೊಂಡಿದ್ದರು.

**10. ಓ ಐ. ಓ (outcome and impact orientation) ತರಬೇತಿ ಮತ್ತು ಸಿಬ್ಬಂದಿ ಕೌಶಲ್ಯಾಭಿವೃದ್ಧಿ ತರಬೇತಿ:**

ಪಡಿಯು ತನ್ನ ಕಾರ್ಯಯೋಜನೆಯ ಪರಿಕಲ್ಪನೆಯ ಸೂಚ್ಯಂಕಗಳ ಈಡೇರಿಕೆಗಾಗಿ ನಿರ್ವಹಿಸಬೇಕಾದ ಕಾರ್ಯಚಟುವಟಿಕೆಗಳನ್ನು ಫಲಿತಾಂಶ ಆಧಾರಿತವಾಗಿ ಹೇಗೆ ಅನುಷ್ಠಾನ ಮಾಡಬಹುದು ಮತ್ತು ಉತ್ತಮ ಪರಿಣಾಮಗಳನ್ನು ಹೇಗೆ ಪಡೆಯಬಹುದು ಎಂಬುದರ ಬಗ್ಗೆ ದಿನಾಂಕ 8 – 10 ನವೆಂಬರ್ 2016ರ ವರೆಗೆ ಮೂರು ದಿನಗಳ ತರಬೇತಿಯನ್ನು ಐ.ಎಸ್.ಡಿ ನಂತೂರಿನಲ್ಲಿ ಶ್ರೀ ಕಿಲೆಶ್ ಚತುರ್ವೇದಿಯವರು ನೀಡಿದರು.



ಸಿಬ್ಬಂದಿ ಕೌಶಲ್ಯಾಭಿವೃದ್ಧಿ ತರಬೇತಿ:

**III ಶಿಕ್ಷಣ ಸಂಪನ್ಮೂಲ ಕೇಂದ್ರಗಳು ಹಮ್ಮಿಕೊಂಡ ಕಾರ್ಯಕ್ರಮಗಳು:**

**a) ಎಸ್.ಡಿ.ಎಮ್.ಸಿ ಸಮನ್ವಯ ಸಮಿತಿ ತಾಲೂಕು ಮಟ್ಟದಲ್ಲಿ ಮತ್ತು ಗ್ರಾಮ ಮಟ್ಟದಲ್ಲಿ ರಚನೆ:**

ಎಸ್.ಡಿ.ಎಮ್.ಸಿ ಸಮನ್ವಯ ಸಮಿತಿಗಳು ರಾಜ್ಯ ಮಟ್ಟದಲ್ಲಿ ಅಸ್ತಿತ್ವದಲ್ಲಿದ್ದು, ಈ ಸಮಿತಿಗಳ ರಚನೆಯನ್ನು ತಳಮಟ್ಟದಲ್ಲಿ ನಡೆಸುವ ನಿಟ್ಟಿನಲ್ಲಿ 'ಪಡಿ'ಯು ಶಿಕ್ಷಣ ಸಂಪನ್ಮೂಲಗಳ ಕೇಂದ್ರಗಳ ಸಹಕಾರದೊಂದಿಗೆ ಜಿಲ್ಲಾ ಮಟ್ಟ ಮತ್ತು ತಾಲೂಕು ಮಟ್ಟದಲ್ಲಿ ಸಮಿತಿಗಳು ರಚನೆಯಾಗಿದ್ದು ಅವುಗಳ ವಿಸ್ತರಣೆಯನ್ನು ಗ್ರಾಮ ಮಟ್ಟಕ್ಕೆ ಪಸರಿಸುವ ನಿಟ್ಟಿನಲ್ಲಿ ಗ್ರಾಮ ಮಟ್ಟದಲ್ಲಿ ಎಸ್.ಡಿ.ಎಮ್.ಸಿ ಸದಸ್ಯರ ಸಮಿತಿಯ ರಚನಾ ಪ್ರಕ್ರಿಯೆಯು ನಡೆಯುತ್ತಾ ಇದ್ದು ಈಗಾಗಲೇ ಉಡುಪಿಯಲ್ಲಿ 8 ಮತ್ತು ದ.ಕ ಜಿಲ್ಲೆಯ 60 ಗ್ರಾಮ ಪಂಚಾಯತುಗಳಲ್ಲಿ ಎಸ್.ಡಿ.ಎಮ್.ಸಿ ರಾಜ್ಯ ಸಮನ್ವಯ ಸಮಿತಿಯ ಬೈಲಾ ಪ್ರಕಾರ ರಚನೆಯಾಗಿದ್ದು ಅವರಿಗೆ ಈ ಸಮಿತಿಯ ಕುರಿತಂತೆ ಓರಿಯೆಂಟೇಷನ್ (ತಿಳುವಳಿಕಾ ಕಾರ್ಯಕ್ರಮ) ನೀಡಲಾಗಿದೆ.



ಗ್ರಾಮ ಮತ್ತು ತಾಲೂಕು ಮಟ್ಟದ ಎಸ್‌ಡಿಎಮ್‌ಸಿ ಸಮನ್ವಯ ಸಮಿತಿ ರಚನೆ ಮತ್ತು ಸಮಾಲೋಚನಾ ಸಭೆ

**b) ಉಡುಪಿ ಜಿಲ್ಲಾ ಮಟ್ಟದ ಎಸ್.ಡಿ.ಎಮ್.ಸಿ ಸಮಾವೇಶ:**

ಜಿಲ್ಲಾ ಶಿಕ್ಷಣ ಸಂಪನ್ಮೂಲ ಕೇಂದ್ರ ಉಡುಪಿ ಜಿಲ್ಲೆ ಮತ್ತು ಜಿಲ್ಲಾ ಎಸ್.ಡಿ.ಎಮ್.ಸಿ ಸಮನ್ವಯ ಸಮಿತಿ ಇವುಗಳ ನೇತೃತ್ವದಲ್ಲಿ ಉಡುಪಿಯಲ್ಲಿ ಜಿಲ್ಲಾ ಮಟ್ಟದ ಎಸ್.ಡಿ.ಎಮ್.ಸಿ ಸಮಾವೇಶವನ್ನು ಶ್ರೀಕೃಷ್ಣ ಮಠದ ರಾಜಾಂಗಣದಲ್ಲಿ ನಡೆಸಲಾಯಿತು. ಮಗು ಮತ್ತು ಕಾನೂನು ಕೇಂದ್ರದ ಡಾ. ನಿರಂಜನಾರಾಧ್ಯರವರು ದಿಕ್ಸೂಚಿ ಭಾಷಣ ಮಾಡಿ ಸರಕಾರಿ ಶಾಲೆಗಳ ಕುರಿತಂತೆ ಸರಕಾರದ ದೃಷ್ಟಿಕೋನವನ್ನು ವಿವರಿಸಿದರು. ಅಲ್ಲದೇ ಎಸ್.ಡಿ.ಎಮ್.ಸಿಗಳು ಸರಕಾರಿ ಶಾಲೆಗಳನ್ನು ಉಳಿಸುವ ನಿಟ್ಟಿನಲ್ಲಿ ತಮ್ಮದೇ ಆದ ಕೊಡುಗೆಯನ್ನು ನೀಡಿದೆ ಮತ್ತು ಅವರು ತಮ್ಮ ಮಾತುಗಳಲ್ಲಿ "ಸರಕಾರಿ ಶಾಲೆಗಳು ಪ್ರಜಾಪ್ರಭುತ್ವದ ತೊಟ್ಟಿಲು. ಪ್ರಜಾಪ್ರಭುತ್ವ ಗಟ್ಟಿ ಆಗಬೇಕಾದರೆ ಸರಕಾರಿ ಶಾಲೆಗಳು ಗಟ್ಟಿಯಾಗಬೇಕು. ಎಲ್ಲಿ ಸರಕಾರಿ ಶಾಲೆಗಳು ಗಟ್ಟಿಯಾಗಿಲ್ಲವೋ ಅಲ್ಲಿ ಪ್ರಜಾಪ್ರಭುತ್ವ ಗಟ್ಟಿಯಾಗಲಿಕ್ಕೆ ಸಾಧ್ಯವಿಲ್ಲ. ಹಾಗಾಗಿ ಬಹಳ ಗುರುತರವಾದ ಜವಾಬ್ದಾರಿಗಳು ಸರಕಾರಿ ಶಾಲೆಗಳ ಮೇಲಿರತಕ್ಕಂತದ್ದು ಅಂದರೆ ಸಂವಿದಾನವನ್ನು ಎತ್ತಿ ಹಿಡಿಯುವಂತಹ, ಆ ಮೌಲ್ಯಗಳನ್ನು ಗೌರವಿಸುವಂತ ಒಂದು ಪ್ರಜ್ಞಾವಂತ ನಾಗರಿಕರನ್ನು ತಯಾರು ಮಾಡುವ ಪ್ರಕ್ರಿಯೆಯಲ್ಲಿ ಸರಕಾರಿ ಶಾಲೆಗಳು ತಮ್ಮದೇ ಆದ ಕೊಡುಗೆಯನ್ನು ನೀಡಿವೆ. ಆದರೆ ಸರಕಾರಗಳು ಮಾತ್ರ ಸೌಲಭ್ಯಗಳನ್ನು ನಿರಾಕರಿಸಿ ಸರಕಾರಿ ಶಾಲೆಗಳನ್ನು ಮುಚ್ಚುವಂತಹ ಪ್ರಕ್ರಿಯೆಗೆ ಪ್ರೋತ್ಸಾಹ ನೀಡುತ್ತಿದೆ ಎಂದರು ಅಲ್ಲದೇ ಅಂಕಿ ಅಂಶಗಳ ವಿಶ್ಲೇಷಣೆಯನ್ನು ಮಾಡಿ ಪ್ರಸ್ತುತ ಸ್ಥಿತಿಗತಿಗಳ ಬಗ್ಗೆ ಬೆಳಕು ಚೆಲ್ಲಿದರು. ಸಭೆಯಲ್ಲಿ ಕರ್ನಾಟಕ ಸರಕಾರದ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ದಿವಾಕರ ಶೆಟ್ಟಿ ಮತ್ತಿತರು ಉಪಸ್ಥಿತರಿದ್ದರು. ಈ ಒಂದು ಸಮಾವೇಶದಲ್ಲಿ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಎಸ್.ಡಿ.ಎಮ್.ಸಿ ಸದಸ್ಯರು ಭಾಗವಹಿಸಿದ್ದರು.



ಎಸ್‌ಡಿಎಮ್‌ಸಿ ರಾಜ್ಯಮಟ್ಟದ ಸಮಾವೇಶ

**c) ಮಕ್ಕಳ ರಕ್ಷಣಾ ನೀತಿ–2016ರ ಕಾರ್ಯಾಗಾರ:**

ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟವು ಮಕ್ಕಳ ರಕ್ಷಣಾ ನೀತಿ–2016ರ ಕಾರ್ಯಾಗಾರವನ್ನು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಅಯೋಗದ ಅನುದಾನದಿಂದ ಬೆಳ್ತಂಗಡಿ ತಾಲೂಕಿನಲ್ಲಿ ಇಲಾಖಾ ಪ್ರತಿನಿಧಿಗಳಿಗೆ ತರಬೇತಿ ನೀಡಲಾಯಿತು. ಮಕ್ಕಳ ರಕ್ಷಣಾ ನೀತಿ–2016 ರ ಕಾರ್ಯಾಗಾರದಲ್ಲಿ ತರಬೇತಿಯನ್ನು ಯುನಿಸೆಫ್‌ನ ರಾಘವೇಂದ್ರ ಭಟ್ ಮುಖ್ಯಸಂಪನ್ಮೂಲ ವ್ಯಕ್ತಿಯಾಗಿ ಮಾಹಿತಿ ನೀಡಿದರು.

**d) ತ್ರಿವರ್ಣ ಬೇಸಿಗೆ ಶಿಬಿರ:**

ಕಾರ್ಕಳ ಶಿಕ್ಷಣ ಸಂಪನ್ಮೂಲ ಕೇಂದ್ರವು ಜೆಸಿಐ ರೂರಲ್ ಕಾರ್ಕಳ ಇವರ ಸಹಕಾರದೊಂದಿಗೆ ತ್ರಿವರ್ಣ ಬೇಸಿಗೆ ಶಿಬಿರವನ್ನು ಹಮ್ಮಿಕೊಂಡಿದ್ದು ಸುಮಾರು 45 ವಿದ್ಯಾರ್ಥಿಗಳು ಈ ಶಿಬಿರದಲ್ಲಿ ಭಾಗವಹಿಸಿದ್ದರು. ಈ ಶಿಬಿರದಲ್ಲಿ ಮಕ್ಕಳಿಗೆ ನಾಯಕತ್ವ, ಕ್ರಾಫ್ಟ್, ನಾಟಕ ತರಬೇತಿ ಮುಂತಾದ ವಿಷಯಗಳಲ್ಲಿ ತರಬೇತಿಯನ್ನು ವಿಭಿನ್ನ ರೀತಿಯಲ್ಲಿ ತರಬೇತಿದಾರರು ನೀಡಿದರು.



**e) ಪೋಕ್ಸೋ ಅರಿವು ಕಾರ್ಯಕ್ರಮ:**

- ಕಾರ್ಕಳ ಪೋಲೀಸ್ ಇಲಾಖೆಯ ಸಹಕಾರದೊಂದಿಗೆ ಮುಡಾರು ಆಂಗ್ಲಮಾಧ್ಯಮ ಶಾಲೆಯಲ್ಲಿ ಪೋಕ್ಸೋ ಅರಿವು ಕಾರ್ಯಕ್ರಮವನ್ನು ಕಾರ್ಕಳ ತಾಲೂಕಿನ ಶಿಕ್ಷಣ ಸಂಪನ್ಮೂಲ ಕೇಂದ್ರವು ಹಮ್ಮಿಕೊಂಡಿತ್ತು.
- ಉಪ್ಪಿನಕುದ್ರುವಿನಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪೋಕ್ಸೋ ಅರಿವು ಕಾರ್ಯಕ್ರಮವನ್ನು ಕುಂದಾಪುರ ತಾಲೂಕು ಶಿಕ್ಷಣ ಸಂಪನ್ಮೂಲ ಕೇಂದ್ರವು ಹಮ್ಮಿಕೊಂಡಿತ್ತು.
- ಶಿಕ್ಷಣ ಇಲಾಖೆಯ ಸಹಕಾರದೊಂದಿಗೆ ಬೈಂದೂರಿನಲ್ಲಿ ಪ್ರೌಢ ಶಾಲಾ ಶಿಕ್ಷಕರಿಗೆ ಪೋಕ್ಸೋ ಅರಿವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

**f) ಮಹಿಳಾ ದೌರ್ಜನ್ಯದ ಬಗ್ಗೆ ಅರಿವು ಕಾರ್ಯಕ್ರಮ**

ಸ್ವಸಹಾಯ ಸಂಘದ ಸದಸ್ಯರಿಗೆ ತೊಟ್ಟಂ ಮತ್ತು ಕಾಂಜಾರ ಕಟ್ಟೆಯಲ್ಲಿ ಅರಿವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

**g) ಬಾಲಕಾರ್ಮಿಕ ಪದ್ಧತಿ ವಿರೋಧಿ** ದಿನಾಚರಣೆಯ ಪ್ರಯುಕ್ತ ಮಕ್ಕಳ ರಕ್ಷಣಾ ವ್ಯವಸ್ಥೆಯ ಬಗ್ಗೆ ಅರಿವು ಕಾರ್ಯಕ್ರಮವನ್ನು ನಕ್ರೆ ಪ್ರೌಢ ಶಾಲೆಯಲ್ಲಿ ನಡೆಸಲಾಯಿತು.

**h) ಮಕ್ಕಳ ಪೋಷಣೆಯಲ್ಲಿ ಪೋಷಕರ ಪಾತ್ರ**

ಕೆದಿಂಜೆಯಲ್ಲಿ ಸ್ವಸಹಾಯ ಸಂಘದ ಸದಸ್ಯರಿಗೆ ಮಕ್ಕಳ ಪೋಷಣೆಯಲ್ಲಿ ಪೋಷಕರ ಪಾತ್ರದ ಬಗ್ಗೆ ಮಾಹಿತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

**i) ಶಾಲೆ ಕಡೆ ನನ್ನ ನಡೆ :**

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಪ್ರಮುಖ ಯೋಜನೆಯಾದ ಶಾಲೆ ಕಡೆ ನನ್ನ ನಡೆ ಕಾರ್ಯಕ್ರಮವು ರಾಜ್ಯಾದ್ಯಾಂತ ಹಮ್ಮಿಕೊಂಡಿದ್ದು ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಸೇರ್ಪಡೆಗೊಳಿಸುವ ಪ್ರಯತ್ನವಾದ್ದರಿಂದ ದ.ಕ ಮತ್ತು ಉಡುಪಿ ಜಿಲ್ಲೆಯಲ್ಲಿ ಈ ಕಾರ್ಯಕ್ರಮದಲ್ಲಿ ಶಿಕ್ಷಣ ಸಂಪನ್ಮೂಲ ಕೇಂದ್ರವು ತನ್ನನ್ನು ತೊಡಗಿಸಿಕೊಂಡಿದ್ದು ಶಿಕ್ಷಣ ಸಂಪನ್ಮೂಲ ಕೇಂದ್ರದ ಸಂಪನ್ಮೂಲ ವ್ಯಕ್ತಿಗಳು ಸಂಪನ್ಮೂಲ ವ್ಯಕಿಗಳಾಗಿ ಭಾಗವಹಿಸಿ ಮಾಹಿತಿ ಪ್ರಸರಣೆಯಲ್ಲಿ ಮತ್ತು ಮಕ್ಕಳನ್ನು ಮರಳಿ ಶಾಲೆಗೆ ಕರೆತರುವಲ್ಲಿ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸಿತ್ತು

**j) ಮಕ್ಕಳ ಮಾಸೋತ್ಸವ:**



ಮಕ್ಕಳ ಮಾಸೋತ್ಸವ ಕಾರ್ಯಕ್ರಮವನ್ನು ಶಿಕ್ಷಣ ಸಂಪನ್ಮೂಲ ಕೇಂದ್ರವು ಕಳೆದ 10 ವರ್ಷಗಳಿಂದ ನಿರಂತರವಾಗಿ ಮಾಡುತ್ತಾ ಬರುತ್ತಿದ್ದು ಈ ಕಾರ್ಯಕ್ರಮವು ಒಂದು ತಿಂಗಳ ನಿರಂತರ ಕಾರ್ಯಕ್ರಮವಾಗಿದ್ದು ಉಡುಪಿ ಮತ್ತು ದ.ಕ ಜಿಲ್ಲೆಯ ವಿವಿಧ ಕಡೆಗಳಲ್ಲಿ ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದ ವಿಷಯದ ಕುರಿತು ಅರಿವು ಮೂಡಿಸುವ ವಿಭಿನ್ನ ಕಾರ್ಯಕ್ರಮವನ್ನು ಮಾಡಲಾಗುತ್ತಿದೆ. 2016 ಸಾಲಿನಲ್ಲಿ ಉಡುಪಿಯಲ್ಲಿ ಪೋಕ್ಸೋ ಕಾಯಿದೆಯ ಕುರಿತಂತೆ 36 ಕಡೆಗಳಲ್ಲಿ ವಿವಿಧ ಗುಂಪುಗಳಿಗೆ ತರಬೇತಿಯನ್ನು ನೀಡಲಾಗಿದೆ. ಹಾಗೆಯೇ ದ.ಕ ಜಿಲ್ಲೆಯಲ್ಲೂ ಮಕ್ಕಳ ರಕ್ಷಣಾ ನೀತಿ–2016ರ ಕುರಿತಂತೆ ಅರಿವು ಕಾರ್ಯಕ್ರಮಗಳನ್ನು 25 ಕಡೆಗಳಲ್ಲಿ ನೀಡಲಾಗಿದೆ.



ಮಕ್ಕಳ ಮಾಸೋತ್ಸವದ ಅಂಗವಾಗಿ ಅರಿವು ಕಾರ್ಯಕ್ರಮ

**k) ಅಸರ್–2016:** ಅಸರ್ ಸಂಸ್ಥೆಯು ವಾರ್ಷಿಕವಾಗಿ ನಡೆಸುವ ಮಕ್ಕಳ ಶೈಕ್ಷಣಿಕ ಸ್ಥಿತಿಗತಿಗಳ ವಾರ್ಷಿಕ ವರದಿಯನ್ನು ಉಡುಪಿ ಮತ್ತು ದ.ಕ ಜಿಲ್ಲೆಯಲ್ಲಿ ಪಡಿಯ ನೇತೃತ್ವದಲ್ಲಿ ಜಿಲ್ಲಾ ಮಟ್ಟದ ತರಬೇತಿ ಮತ್ತು ಸಮೀಕ್ಷೆಯನ್ನು ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಸಹಯೋಗದೊಂದಿಗೆ ಶೈಕ್ಷಣಿಕ ಸ್ಥಿತಿಗತಿಗಳ ವಾರ್ಷಿಕ ವರದಿಯನ್ನು ಕಲೆ ಹಾಕುವ ಜವಬ್ದಾರಿಯನ್ನು ವಹಿಸಿಕೊಂಡಿದ್ದು ಸಮೀಕ್ಷಕರಿಗೆ

ತರಬೇತಿಯನ್ನು ನೀಡುವುದರ ಜತೆಗೆ ದ.ಕ ಮತ್ತು ಉಡುಪಿ ಜಿಲ್ಲೆಯ ಆಯ್ದ 30 ಹಳ್ಳಿಗಳ ಮಕ್ಕಳ ಶೈಕ್ಷಣಿಕ ಸ್ಥಿತಿಗತಿಗಳ ವಾರ್ಷಿಕ ವರದಿಯನ್ನು ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಸಹಕಾರದೊಂದಿಗೆ ನಡೆಸಿ ಜಿಲ್ಲಾ ಮಟ್ಟದ ವರದಿಯನ್ನು ಅಸರ್ ಸಂಸ್ಥೆಗೆ ಕಳುಹಿಸಿಕೊಡಲಾಯಿತು.



ಅಸರ್ ಮಕ್ಕಳ ಸಮೀಕ್ಷೆ

### IV) ಮಗು ಸ್ನೇಹಿ ಶಾಲಾ ವಾತಾವರಣ ನಿರ್ಮಾಣದಲ್ಲಿನ ಯಶಸ್ವಿ ಪ್ರಯೋಗಗಳು:

**1. ಪ್ರಗತಿಯತ್ತ ಕೋಟೆಬಾಗಿಲು ಶಾಲೆ**

ಕಳೆದ ಕೆಲವು ವರ್ಷಗಳಿಂದ ಕಿರಿಯ ಪ್ರಾಥಮಿಕ ಶಾಲೆ ಕೋಟೆಬಾಗಿಲು ಮಕ್ಕಳ ಸಂಖ್ಯೆಯೊಂದಿಗೆ ಮೂಲಭೂತ ಸೌಕರ್ಯಗಳ ಕೊರತೆಯಿಂದ ಬಳಲುತ್ತಾ ಬಂದಿದ್ದು ಶಾಲಾ ಮೇಲ್ಛಾವಣಿ ಕುಸಿದು ಬೀಳುವ ಪರಿಸ್ಥಿತಿಯಲ್ಲಿತ್ತು. ಕಳೆದ 2 ವರ್ಷಗಳ ಹಿಂದಿನ ಪರಿಸ್ಥಿತಿಯು ಮಕ್ಕಳ ಶಿಕ್ಷಣಕ್ಕೆ ಪೂರಕವಾಗಿರಲಿಲ್ಲ. ಪಡಿಯು ಮಗು ಸ್ನೇಹಿ ಶಾಲೆ ನಿರ್ಮಾಣ ಯೋಜನೆಯಲ್ಲಿ ಈ ಶಾಲೆಯು ಈಗ ಬೆಳವಣಿಗೆಯತ್ತ ಸಾಗುತ್ತ ಇದೆ. 21 ಮಕ್ಕಳಿಂದ ಕೂಡಿದ್ದ ಶಾಲೆ ಇಂದು ಸುಮಾರು 35 ಮಕ್ಕಳನ್ನು ಹೊಂದಿದೆ. ಸಮುದಾಯದ ಭಾಗವಹಿಸುವಿಕೆ ಸಾಕಷ್ಟು ಹೆಚ್ಚಾಗಿದ್ದು, ಎಸ್.ಡಿ.ಎಮ್.ಸಿ ಸಕ್ರಿಯವಾಗಿ ಶಾಲಾಭಿವೃದ್ಧಿಯಲ್ಲಿ ತೊಡಗಿಕೊಂಡಿದೆ. ಎಸ್.ಡಿ.ಎಮ್.ಸಿ ಸ್ಥಳೀಯ ಸಂಪನ್ಮೂಲಗಳನ್ನು ಕ್ರೂಢೀಕರಿಸಿ ಶಾಲೆಯ ಮೇಲ್ಛಾವಣಿಯನ್ನು ದುರಸ್ತಿಗೊಳಿಸಿದುದಲ್ಲದೆ, ತರಗತಿ ಕೋಣೆಗಳು ಅಲಂಕೃತವಾಗಿದ್ದು ಮಕ್ಕಳಿಗೆ ಸುಂದರವಾದ ಗ್ರಂಥಾಲಯವನ್ನು ಒದಗಿಸಿದೆ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಸಾಕಷ್ಟು ಪ್ರಯತ್ನವನ್ನು ಮಾಡುತ್ತಾ ಇದೆ. ಅಲ್ಲದೇ ಸ್ಥಳೀಯ ಯುವಕ ಸಂಘಗಳು ತಮ್ಮನ್ನು ತಾವು ಶಾಲೆಯ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡಿವೆ.



ಮೊದಲು ನಂತರ

**2. ಗುಣಾತ್ಮಕ ಸಭೆಯತ್ತ ಎಸ್.ಡಿ.ಎಮ್.ಸಿ**

ಎಸ್.ಡಿ.ಎಮ್.ಸಿ ಎಂದರೆ ಒಂದು ಶಾಲೆಯ ಅಡಿಗಲ್ಲು ಇದ್ದಂತೆ. ಪ್ರತಿಯೊಂದು ಎಸ್.ಡಿ.ಎಮ್.ಸಿ.ಯೂ ತನ್ನ ಜವಾಬ್ದಾರಿಯನ್ನು ಪೂರ್ಣಗೊಳಿಸಿದರೆ ಒಂದು ಶಾಲೆ ಮಾದರಿ ಶಾಲೆ ಆಗಬಹುದು ಎಂಬುದರಲ್ಲಿ ಸಂಶಯವಿಲ್ಲ.

ಆದರೆ ಮಗು ಸ್ನೇಹಿ ಶಾಲೆಯಾಗಿ 24 ಶಾಲೆಗಳನ್ನು ಆಯ್ಕೆ ಮಾಡಿದ ಆರಂಭದಲ್ಲಿ ಇಲ್ಲಿನ ಎಸ್.ಡಿ.ಎಮ್.ಸಿಗಳ ಸಭೆಯು ಹೆಚ್ಚಾಗಿ ಕೋರಂ ಇಲ್ಲದೆ ನಡೆಯುತಿತ್ತು. ಈ ಎಲ್ಲಾ ಅಂಶಗಳನ್ನು ಮನಗಂಡ ಸಂಸ್ಥೆಯು ಶಿಕ್ಷಣ ಸಂಪನ್ಮೂಲ ಕೇಂದ್ರದ ಮೂಲಕ ಶಿಕ್ಷಣ–ಶಿಕ್ಷಕ ಸಪ್ತಾಹದ ಮೂಲಕ ಮತ್ತು ಇತರ ಕಾರ್ಯಕ್ರಮಗಳ ಮೂಲಕ ಎಸ್.ಡಿ.ಎಮ್.ಸಿ ಸದಸ್ಯರನ್ನು ಭೇಟಿಯಾಗಿ ಅವರ ಜವಾಬ್ದಾರಿಗಳನ್ನು ತಿಳಿಸುತ್ತಾ ಶಾಲೆಗಾಗಿ ಅವರು ಮಾಡಬೇಕಾದ ಅವರ ಕರ್ತವ್ಯಗಳನ್ನು ತಿಳಿಸಿ ನಂತರದ ದಿನಗಳಲ್ಲಿ ನಿರಂತರ ಶಾಲಾ ಭೇಟಿ ಹಾಗೂ ಕಾರ್ಯಕ್ರಮಗಳ ಮೂಲಕ ಎಸ್.ಡಿ.ಎಮ್.ಸಿ ಜಾಗೃತವಾಗುವಂತೆ ಮಾಡಲಾಯಿತು. ನಂತರ ಎಚ್ಚೆತ್ತ ಎಸ್.ಡಿ.ಎಮ್.ಸಿ ತನ್ನ ಜವಾಬ್ದಾರಿಗಳನ್ನು ಅರಿತುಕೊಂಡು ತನ್ನಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳಲಾರಂಭಿಸಿತು. ಇದಿಗ ಪ್ರತೀ ತಿಂಗಳು ಸಭೆ ಸೇರುವುದು ಹಾಗೂ ಪ್ರತೀ ಎಸ್.ಡಿ.ಎಮ್.ಸಿ ಸದಸ್ಯರು ಸಭೆಗಳಲ್ಲಿ ತಪ್ಪದೇ ಹಾಜರಾಗಿ ತಮ್ಮ ಸಲಹೆ–ಸೂಚನೆಗಳನ್ನು ನೀಡುತ್ತಿದ್ದಾರೆ. ತಮ್ಮ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಿದ್ದಾರೆ.



ಈ ರೀತಿಯಾಗಿ ಎಸ್.ಡಿ.ಎಮ್.ಸಿ ಶಾಲಾಭಿವೃದ್ಧಿಯಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುತ್ತಿರುವುದು ಉತ್ತಮ ಬದಲಾವಣೆ.

**3. ಮಕ್ಕಳ ಹಕ್ಕುಗಳ ಕ್ಲಬ್‌ಗಳು ಬೆಳಕಿಗೆ ತಂದ ಬಾಲ್ಯ ವಿವಾಹ ಪ್ರಕರಣ:**

ತಮ್ಮ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಆಗುತ್ತಿರುವ ಬಾಲ್ಯವಿವಾಹದ ಬಗ್ಗೆ ಎಚ್ಚೆತ್ತು ಸಂಬಂಧಪಟ್ಟ ಪ್ರಾಧಿಕಾರದ ಗಮನಕ್ಕೆ ತಂದು ತಡೆಗಟ್ಟುವಲ್ಲಿ ಯಶಸ್ವಿಯಾದ ಕೆದ್ದಳಿಕೆ ಶಾಲೆಯ ಮಕ್ಕಳ ಹಕ್ಕುಗಳ ಸಂಘ. ತಮ್ಮ ಮಕ್ಕಳ ಹಕ್ಕುಳ ಕ್ಲಬ್‌ಗಳಲ್ಲಿ ಸಾಮಾಜಿಕ ಪಿಡುಗುಗಳ ಬಗ್ಗೆ ಚರ್ಚೆ ಮತ್ತು ಶಾಲಾ ವ್ಯಾಪ್ತಿಯಲ್ಲಿ ಅಂತಹ ಪ್ರಕರಣಗಳನ್ನು ಬೆಳಕಿಗೆ ತರುವಲ್ಲಿನ ವರೆಗಿನ ಬೆಳವಣಿಗೆಗಳು ಶಾಲಾ ಹಂತದಲ್ಲಿಯೇ ಮಕ್ಕಳಲ್ಲಿ ಜಾಗೃತ ಮನೋಭಾವನೆಯನ್ನು ಬೆಳೆಸಿದೆ.

**4. ಶಿಕ್ಷಣದತ್ತ ಮಕ್ಕಳು:**

ತಲ್ಲೂರು ಗ್ರಾಮ ಪಂಚಾಯತು ವ್ಯಾಪ್ತಿಯ ಕೋಟೆಬಾಗಿಲು ಪ್ರದೇಶವು ಹಿಂದುಳಿದ ಪ್ರದೇಶವಾಗಿದ್ದು ಶೈಕ್ಷಣಿಕವಾಗಿ ಹಿಂದುಳಿದಿದೆ. ಮಕ್ಕಳ ಶಿಕ್ಷಣಕ್ಕೆ ಪ್ರಾಮುಖ್ಯತೆ ಕೊಡದ ಕುಟುಂಬಗಳು ಈ ಪ್ರದೇಶದಲ್ಲಿದ್ದು ಸುಮಾರು 8 ಮಕ್ಕಳು ಶಾಲೆಯಿಂದ ಹೊರಗುಳಿದಿದ್ದು ಶಿಕ್ಷಕರು ಎಷ್ಟೇ ಪ್ರಯತ್ನ ಪಟ್ಟರೂ

ಮಕ್ಕಳು ಶಿಕ್ಷಣದಲ್ಲಿ ಆಸಕ್ತಿಯಿಲ್ಲದೆ, ಹೆತ್ತವರ ಪ್ರೋತ್ಸಾಹವಿಲ್ಲದೆ ಶಾಲೆಯಿಂದ ಹೊರಗುಳಿದಿದ್ದರು. ಪಡಿ ಸಿಬ್ಬಂದಿಯು ಈ ಒಂದು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ್ದು, ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಸಹಕಾರದೊಂದಿಗೆ ಮನೆ ಭೇಟಿ, ಆಪ್ತ ಸಮಾಲೋಚನೆಗಳ ಮೂಲಕ ಮಕ್ಕಳನ್ನು ಶಾಲೆಗೆ ಕರೆತರುವ ಪ್ರಕ್ರಿಯೆಯಲ್ಲಿ ಸಾಕಷ್ಟು ಪ್ರಯತ್ನವನ್ನು ಮಾಡಿತ್ತು. ಅಲ್ಲದೆ ಅಂದಿನ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಗಮನಕ್ಕೂ ತಂದು ಅವರು ಮನೆ ಭೇಟಿ ಮಾಡಿ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನವನ್ನು ನೀಡಿರುತ್ತಾರೆ. ಇಲ್ಲಿ ನಿರಂತರ ಅನುಸರಣೆಯಿಂದಾಗಿ ಮತ್ತು ಶಿಕ್ಷಕರು ಮಕ್ಕಳೊಂದಿಗಿನ ಸ್ನೇಹಯುತ ಸಂಬಂಧ ಮತ್ತು ಹೆತ್ತವರಿಗೆ ಸೂಕ್ತ ಮಾರ್ಗದರ್ಶನದಿಂದಾಗಿ ಇಂದು ಈ ಮಕ್ಕಳು ಶಾಲೆಗೆ ನಿರಂತರವಾಗಿ ಹಾಜರಾಗುತ್ತಿದ್ದಾರೆ.

### 5. ಸ್ವಾವಲಂಬನೆ ಕಲಿಕೆಯತ್ತ ಶಾಲಾ ಮಕ್ಕಳು

ಮನಸ್ಸು ಮತ್ತು ಸಾಧಿಸುವ ಛಲವೊಂದಿದ್ದರೆ ಏನನ್ನಾದರೂ ಸಾಧಿಸಬಹುದು ಎಂಬುದಕ್ಕೆ ಸ್ಪಷ್ಟ ಉದಾಹರಣೆಯೆಂದರೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಅರ್ಕ ಇಲ್ಲಿನ ಮಕ್ಕಳು. ಈ ಶಾಲೆಯ ಮೀನಾ ಮಕ್ಕಳ ಹಕ್ಕುಗಳ ಸಂಘದ ಮಕ್ಕಳು ಹಾಗೂ ಶಿಕ್ಷಕರ ಮಾರ್ಗದರ್ಶನದಲ್ಲಿ ಬದುಕಿನ ಸ್ವಾವಲಂಬನೆ ಕಲಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ನಿತ್ಯ ಜೀವನದಲ್ಲಿ ಬರುವ ನಾನಾ ರೀತಿಯ ಸಾಂಕ್ರಾಮಿಕ ರೋಗಗಳಿಗೆ ಕೈ ತೊಳೆಯದೆ ಆಹಾರ ಸೇವನೆ ಮಾಡುವುದು ಮುಖ್ಯ ಕಾರಣವಾಗಿದ್ದು ಈ ಬಗ್ಗೆ ಶಾಲಾ ಮಕ್ಕಳಿಗೆ ಆರೋಗ್ಯ ಇಲಾಖೆಯಿಂದ ಮಾಹಿತಿ ನೀಡಲಾಯಿತು. ಹಾಗೂ ತೊಳೆಯುವ ವಿಧಾನಗಳನ್ನು ತಿಳಿಸಲಾಯಿತು. ಇದನ್ನು ಪ್ರತಿನಿತ್ಯ ಶಾಲೆಯಲ್ಲಿ ಅನುಸರಿಸಲು ಮಕ್ಕಳಿಗೆ ಬೇಕಾಗುವ ಸೋಪ್ ಮತ್ತು ಶೌಚಾಲಯ ಸ್ವಚ್ಛಗೊಳಿಸುವುದಕ್ಕಾಗಿ ಫಿನಾಯಿಲ್ ತಯಾರಿಸುವ ಯೋಚನೆಯನ್ನು ಮಕ್ಕಳೆ ತಯಾರುಗೊಳಿಸಿದರು. ಹಾಗೂ ಶಿಕ್ಷಕರ ಮಾರ್ಗದರ್ಶನದಲ್ಲಿ ತರಬೇತಿಯನ್ನೂ ಪಡೆದುಕೊಂಡು ಮಕ್ಕಳೆ ಸೋಪ್ ಮತ್ತು ಫಿನಾಯಿಲ್ ತಯಾರಿಸಲು ಮುಂದಾಗಿರುವುದು ಮಾತ್ರವಲ್ಲ ಪ್ರತೀ 15 ದಿನಗಳಿಗೊಮ್ಮೆ ಶಾಲೆಯಲ್ಲಿಯೇ ಎಲ್ಲಾ ಮಕ್ಕಳು ಸೇರಿಕೊಂಡು ಸೋಪು ಮತ್ತು ಫಿನಾಯಿಲ್ ತಯಾರಿಸುತ್ತಾರೆ. ಈ ಮಕ್ಕಳು ಶಾಲೆಗೆ ಮಾದರಿಯಾಗಿದ್ದಾರೆ.



ಮಕ್ಕಳಿಂದ ಫಿನಾಯಿಲ್ ಮತ್ತು ಸೋಪ್ ತಯಾರಿಕೆ

### 6. ಶಾಲೆ ಬಿಟ್ಟ ಮಕ್ಕಳನ್ನು ಮರಳಿ ಶಾಲೆಗೆ ಸೇರಿಸಿದ ಮೀನಾ ಮತ್ತು ಮಕ್ಕಳ ಹಕ್ಕುಗಳ ಸಂಘದ ಮಕ್ಕಳು

ಮಗು ಸ್ನೇಹಿ ಶಾಲಾ ಕಾರ್ಯಕ್ರಮದಡಿ ಈ ಶಾಲೆಯನ್ನು ಆಯ್ಕೆ ಮಾಡುವಾಗ ಈ ತಂಡಗಳು ಕೇವಲ ನಾಮಕಾವಸ್ತೆಗಾಗಿ ಮಾತ್ರ ರಚನೆಯಾಗಿತ್ತು. ಯಾವುದೇ ಚಟುವಟಿಕೆಗಳನ್ನು ಸಭೆಗಳನ್ನೂ ನಡೆಸುತ್ತಿರಲಿಲ್ಲ. ಈ ಎಲ್ಲ ಅಂಶಗಳನ್ನು ಮನಗಂಡ ಶಾಲಾ ಶಿಕ್ಷಕರಿಗೆ ಮಕ್ಕಳಿಗೆ ಮೀನಾ ಮತ್ತು ಮಕ್ಕಳ ಹಕ್ಕುಗಳ ಸಂಘದ ಧ್ಯೇಯ–ಉದ್ದೇಶಗಳನ್ನು ತಿಳಿಸಿ ಇದರ ಕಾರ್ಯಚಟುವಟಿಕೆಗಳ ಬಗ್ಗೆ ಶಿಕ್ಷಕರೊಂದಿಗೆ ಸಮಾಲೋಚನಾ ಸಭೆಗಳನ್ನು ನಡೆಸಲಾಯಿತು.

ನಂತರದಲ್ಲಿ ಮಕ್ಕಳ ಹಕ್ಕುಗಳ ಸಂಘದ ಸಭೆಗಳನ್ನು ಪ್ರತೀ ತಿಂಗಳು ನಡೆಸಿ ಯೋಜಿತ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. ಮಕ್ಕಳ ಸಮಸ್ಯೆಗಳು, ನಿರಂತರ ಗೈರು ಹಾಜರಾಗುವ ಮಕ್ಕಳ ಬಗ್ಗೆ ಚರ್ಚೆಗಳನ್ನು ನಡೆಸುವುದು ಹಾಗೂ ಗೈರು ಹಾಜರಾಗುವ ಮಕ್ಕಳ ಮನೆ ಭೇಟಿ ಮಾಡುವುದು ಅಲ್ಲದೆ ಶಾಲಾ ಚಟುವಟಿಕೆಗಳಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳು ಸಮಾನತೆಯಿಂದ ಜವಾಬ್ದಾರಿಗಳನ್ನು ಹಂಚಿಕೊಂಡು ತಮ್ಮಲ್ಲಿ ನಾಯಕತ್ವವನ್ನು ಬೆಳೆಸಿಕೊಂಡಿದ್ದಾರೆ.



### 7. ಮಕ್ಕಳ ಬೇಡಿಕೆಗೆ ಸ್ಪಂದಿಸಿದ ಕಬಕ ಗ್ರಾಮ ಪಂಚಾಯತ್

ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಅರ್ಕ ಇಲ್ಲಿನ ಮಕ್ಕಳಿಗೆ ಬೇಕಾದ ತರಗತಿ ಕೋಣೆಗಳು ಹಾಗೂ ಎಲ್ಲಾ ಮೂಲಭೂತ ಸೌಕರ್ಯಗಳು ಇತ್ತಾದರೂ ಮಕ್ಕಳಿಗೆ ಆಟವಾಡಲು ಬೇಕಾದ ವಿಸ್ತಾರದ ಆಟದ ಮೈದಾನವೂ ಇತ್ತಾದರೂ ನಡು ನಡುವೆ ದೊಡ್ಡ ದೊಡ್ಡ ಬಂಡೆಕಲ್ಲುಗಳಿದ್ದು ಮಕ್ಕಳಿಗೆ ಆಟವಾಡಲು ಹಾಗೂ ಇತರ ಚಟುವಟಿಕೆಗಳನ್ನು ಅಲ್ಲಿ ನಡೆಸಲು ಸಾಧ್ಯವಾಗುತ್ತಿರಲಿಲ್ಲ. ಈ ವಿಚಾರವಾಗಿ ಕಲ್ಲುಗಳನ್ನು ತೆಗೆಯಲು ಶಿಕ್ಷಕರು ಸಾಕಷ್ಟು ಬಾರಿ ಪಂಚಾಯತ್ ಸದಸ್ಯರ ಗಮನಕ್ಕೆ ತಂದರೂ ಪ್ರಯೋಜನವಾಗಿರಲಿಲ್ಲ. ಈ ಬಗ್ಗೆ ಮಕ್ಕಳ ಹಕ್ಕುಗಳ ಸದಸ್ಯರಿಗೆ ತಮ್ಮ ಹಕ್ಕುಗಳು, ಅದರಲ್ಲಿಯೂ ಭಾಗವಹಿಸುವ ಹಕ್ಕು ಮತ್ತು ಇದರ ಅನುಷ್ಠಾನಕ್ಕಾಗಿ ಇರುವ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮ ಸಭೆಯ ಬಗ್ಗೆ ಹಾಗು ಅವಶ್ಯಕತೆಯ ಬಗ್ಗೆ ಮಾಹಿತಿ ಮತ್ತು ತರಬೇತಿ ನೀಡಲಾಯಿತು. ಈ ತರಬೇತಿಯ ಪ್ರಯೋಜನ ಪಡೆದುಕೊಂಡ ಮಕ್ಕಳು ತಮ್ಮ ಹಲವಾರು ಬೇಡಿಕೆಗಳನ್ನು ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ ಪ್ರಸ್ತಾಪಿಸಲು ನಿರ್ಧರಿಸಿದರು. ಅಂತೆಯೇ ಮಕ್ಕಳ ಗ್ರಾಮಸಭೆಯಲ್ಲಿ ಮಕ್ಕಳ ಬೇಡಿಕೆಯನ್ನು ಆಲಿಸಿದ ಪಂಚಾಯತ್ ಶಾಲೆಯ ಆಟದ ಮೈದಾನದಲ್ಲಿರುವ ದೊಡ್ಡ ದೊಡ್ಡ ಕಲ್ಲುಗಳನ್ನು ತೆರವುಗೊಳಿಸಿ ಮಕ್ಕಳಿಗೆ ಆಟವಾಡಲು ಸೂಕ್ತ ಅವಕಾಶವನ್ನು ಕಲ್ಪಿಸಿದ್ದು ಇದೀಗ ಮಕ್ಕಳು ತಮ್ಮ ಆಟದ ಸಮಯದಲ್ಲಿ ಸಂತೋಷವಾಗಿ ಮೈದಾನದಲ್ಲಿ ಆಟವಾಡುತ್ತಿದ್ದಾರೆ.

**8. ಪೌಷ್ಟಿಕಾಂಶಯುಕ್ತ ಬಿಸಿಯೂಟಕ್ಕೆ ಎಸ್.ಡಿ.ಎಮ್.ಸಿ ಕೊಡುಗೆ**

'ಪಡಿ'ಯ ಯೋಜನೆಯ ಶಾಲೆಗಳಲ್ಲಿ ಹೆತ್ತವರು ಮತ್ತು ಎಸ್.ಡಿ.ಎಮ್.ಸಿ ಸೇರಿಕೊಂಡು ಶಾಲಾ ಕೈ ತೋಟ ರಚಿಸಿ ಮಕ್ಕಳಿಗೆ ತರಕಾರಿ ಹಣ್ಣು ಹಂಪಲುಗಳಿಂದ ಕೂಡಿದ ಪೌಷ್ಟಿಕಾಂಶಯುಕ್ತ ಬಿಸಿಯೂಟ ನೀಡುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ.

'ಪಡಿ'ಯು ಪೋಷಕರ ಮತ್ತು ಎಸ್.ಡಿ.ಎಮ್.ಸಿ ಸಭೆಗಳಲ್ಲಿ ಭಾಗವಹಿಸಿ ಮಕ್ಕಳಿಗೆ ಉತ್ತಮ ಪೌಷ್ಟಿಕಾಂಶಯುಕ್ತ ಬಿಸಿಯೂಟ ನೀಡಲು ಹಸಿರು ಸೊಪ್ಪು ತರಕಾರಿ, ಹಣ್ಣುಹಂಪಲುಗಳ ಅಗತ್ಯತೆ ಬಗ್ಗೆ ತಿಳಿಸಿ ಶಾಲಾ ಸುತ್ತಮುತ್ತ ಕೈತೋಟ ರಚಿಸಲು ಪ್ರೇರೆಪಣೆ ನೀಡಲಾಯಿತು. ಅದರಂತೆ ಪೋಷಕರು ತಮ್ಮ ಸಭೆಗಳಲ್ಲಿ ಕೈತೋಟ ರಚಿಸಲು ನಿರ್ಣಯ ಕೈಗೊಂಡರು ಮತ್ತು ತಮ್ಮ ಬಿಡುವಿನ ಸಮಯವನ್ನು ಶಾಲೆಗಳಿಗೆ ಬಳಕೆ ಮಾಡಿದ ಪೋಷಕರು ತಮ್ಮ ರಜಾದಿನಗಳಲ್ಲಿ ಶಾಲೆಯಲ್ಲಿ ಕೈತೋಟ ರಚಿಸುವಲ್ಲಿ ಕಾರ್ಯಪ್ರವೃತ್ತರಾದರು. ಈ ಬಗ್ಗೆ ತಮ್ಮ ಶಾಲಾ ಮಕ್ಕಳಿಗೆ ಕೂಡ "ಜೀವನ ಪಾಠ" ಕೃಷಿಯ ಬಗ್ಗೆ ಮನವರಿಕೆ ಮಾಡಿಸಿದರು. ಹಲವಾರು ರೀತಿಯ ಸೊಪ್ಪು ತರಕಾರಿಗಳನ್ನು ಶಾಲಾ ವಠಾರದಲ್ಲಿ ಬೆಳೆಸಿದರು. ಮಕ್ಕಳಿಗೆ ಉತ್ತಮ ಪೌಷ್ಟಿಕಾಂಶಯುಕ್ತ ಆಹಾರ ಲಭಿಸುವಂತಾಯಿತು. ಮಕ್ಕಳಿಗೆ ಕೃಷಿಯ ಬಗ್ಗೆ ಆಸಕ್ತಿ ಮೂಡಿತು.



ಎಸ್.ಡಿ.ಎಮ್.ಸಿ. ಮತ್ತು ಹೆತ್ತವರಿಂದ ಶಾಲಾ ಕೈತೋಟಕ್ಕೆ ಶ್ರಮದಾನ

**9. ಶಾಲಾ ದಾಖಲಾತಿ ಹೆಚ್ಚಿಸಲು ಎಸ್.ಡಿ.ಎಮ್.ಸಿಯು ಪಟ್ಟಶ್ರಮ**

ಸರಕಾರಿ ಶಾಲೆಗಳ ಒಂದು ಮೂಲಭೂತ ಸಮಸ್ಯೆ ಎಂದರೆ ಮಕ್ಕಳ ಕೊರತೆ, ಈ ಸಮಸ್ಯೆಗೆ ಎಸ್.ಡಿ.ಎಮ್.ಸಿಗಳು ದಾಖಲಾತಿ ಆಂದೋಲನ ಮಾಡಲು ಮತ್ತು ತಮ್ಮ ಶಾಲೆಗೆ ಮಕ್ಕಳ ದಾಖಲಾತಿ ಹೆಚ್ಚಿಸಲು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.ಅವುಗಳಲ್ಲಿ ಮುಖ್ಯವಾಗಿ ಶಾಲೆ ಕಡೆ ನನ್ನ ನಡೆ ಕಾರ್ಯಕ್ರಮಗಳ ಮೂಲಕ ಮತ್ತು ಸರಕಾರಿ ಶಾಲೆಗಳಲ್ಲಿ ಸಿಗುವ ಸೌಲಭ್ಯಗಳ ಕರಪತ್ರಗಳ ಮೂಲಕ ಹೆತ್ತವರ ಭೇಟಿ ಮತ್ತು ಮಕ್ಕಳ ಕಲಿಕೆ ಪೂರಕವಾಗಿ ಬೇಕಾಗುವ ಸೌಲಭ್ಯಗಳನ್ನು ದೊರಕಿಸಿ ಕೊಡುವಲ್ಲಿ ಸಾಕಷ್ಟು ಪ್ರಯತ್ನವನ್ನು ಮಾಡಿರುತ್ತಾರೆ.



ಎಸ್.ಡಿ.ಎಮ್.ಸಿ.ಯಿಂದ ಮನೆ ಭೇಟಿ ಮತ್ತು ಪುಸ್ತಕ ವಿತರಣೆ


| ನಿರ್ವಹಣೆ | ಪ್ರಕಟಣೆ | ಸಲಹೆ ಮತ್ತು ಸಹಕಾರ |
|---|---|---|
| ರೆನ್ನಿ ಡಿ'ಸೋಜ | ದಾಖಲಾತಿ, ಸಂಶೋಧನೆ ಮತ್ತು ತರಬೇತಿ ವಿಭಾಗ, ಪಡಿ | ಪಡಿ ಬಳಗ |



ವಿಳಾಸ : ಗುಣಾತ್ಮಕ ಶಿಕ್ಷಣಕ್ಕಾಗಿ, ಮಕ್ಕಳ ಸ್ನೇಹಿ ಸಮಾಜ ನಿರ್ಮಾಣ
ಪಡಿ, ಗಣೇಶ, ಕೊಲಾಸೊ ಆಸ್ಪತ್ರೆಯ ಬಳಿ, 2ನೇ ಅಡ್ಡ ರಸ್ತೆ, ಬೆಂದೂರುವೆಲ್, ಮಂಗಳೂರು – 02.
ದೂರವಾಣಿ: 0824–2439895 www.padivalored.com